ಸಂಪುಟ : 8 ಸಂಚಿಕೆ : 263 ಪುಟ : 4 ಬೆಲೆ : 3.00 ಮಂಗಳವಾರ ನವ್ವಂಬರ್ 28, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 263 Pages : 4 Price : 3.00 Tuesday November 28, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No: GDG/72/2023-25




## ಇಂದಿನ ನೀರು ಪೂರೈಕೆ ಮಾಹಿತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ನವೆಂಬರ್ 28ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 27, 30 ಕಾಶಿ ವಿಶ್ವನಾಥ್ ನಗರ, ಅಸೂಟಿಯವರ ಲೈನ್, ಹನುಮಂತ ದೇವರ ಗುಡಿ ಲೈನ್, ದುರ್ಗಮ್ಮನ ಗುಡಿ ಲೈನ್, ಕಣವಿಯವರ ಲೈನ್, ವಿ ಆರ್ ಎಲ್ ಆಫೀಸ್ ಲೈನ್, ಮಾಳಿಕೋಟೇಶ್ವರ ಪಾಶಿಯವರ ಲೈನ್, ರೋಣದರ ಲೈನ್, ಕೇಶವ ನಗರ, ಸಂಕಣ್ಣವರ ಲೇಔಟ್, ಪುಟ್ಟರಾಜನಗರ,

ವಾರ್ಡ್ ನಂ. 28 ಅಪಾರ್ಟ್ಮೆಂಟ್ ಲೈನ್, ದೇವಗಿರಿಯವರ ಲೈನ್, ಸಂತೋಷ ಕಿರಾಣಿ ಅಂಗಡಿ ಲೈನ್, ಕೊರ್ಲಹಳ್ಳಿ ಮಾಸ್ತರ್ ಲೈನ್, ಕಾಗದಗಾರ ಲೈನ್, ಅಬ್ಬಿಗೇರಿ ಲೈನ್, ಎಸ್.ಎಸ್.ಪಾಟೀಲರ ಲೈನ್, ಗವಾಯಿಗಳ ಆಶ್ರಮ. ವಾರ್ಡ್ ನಂ. 7, 5 ಶಿವಾಜಿನಗರ ಪಂಚಲಕ್ಷ್ಮಿ ಬಡಾವಣೆ 4 ಭಾಗಗಳು, ನಂದೀಶ್ವರ ಮಠ, ಶುದ್ಧ ನೀರಿನ ಭಾಗ, ರಂಗಪ್ಪಜ್ಜನ ಮಠ ಎರಡನೆಯ ಬ್ಯಾಚ್. ವಾರ್ಡ್ ನಂ. 15, 16, 17 ಶಹಪುರ ಪೇಟೆ, ಜವಳಗಲ್ಲಿ, ಡಿಸಿ ಮಿಲ್ ರೋಡ್, ಮಹೇಂದ್ರ ಕರ್ ಸರ್ಕಲ್, ಮೀನ ಮಾರ್ಕೆಟ್, ಬಸವೇಶ್ವರ ಗುಡಿ ಲೈನ್, ಶುದ್ಧ ನೀರಿನ ಘಟಕದ ಭಜಂತ್ರಿ ಓಣಿ, ಕರ್ನಾಟಕ ಟಾಕೀಸ್ ಲೈನ್, ಗಾಂಧಿ ಸರ್ಕಲ್, ಗಣಪತಿ ಗುಡಿ ಲೈನ್, ವಾರ್ಡ್ ನಂ. 1 ಎಸ್ ಎಂ ಕೃಷ್ಣ ನಗರ ಮೇಲಿನ ಭಾಗ ಕೆಳಗಿನ ಭಾಗ.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ರೋಣ ತಾಲೂಕು ಕಚೇರಿಗೆ ಡಿಸಿ ಭೇಟಿ

■ ವಿಜಯಸಾಕ್ಷಿ ಸುದ್ದಿ, ಗದಗ



ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ವೈಶಾಲಿ ಎಂ.ಎಲ್. ಅವರು ಮಂಗಳವಾರದಂದು ರೋಣ ತಾಲೂಕು ಕಚೇರಿಗೆ ಭೇಟಿ ನೀಡಿ ಪ್ರಗತಿ ಪರಿಶೀಲಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸ ಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.




■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೋಯ್ಲಿ ಅವರು ಗದುಗಿನ ವೀರನಾರಾಯಣನಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದರು. ಈ ಸಂದರ್ಭದಲ್ಲಿ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ಮಾಜಿ ಸಂಸದ ಆಯ್.ಜಿ. ಸನದಿ, ಮಾಜಿ ಶಾಸಕ ಡಿ.ಆರ್. ಪಾಟೀಲ, ಮಾಜಿ ಜಿಲ್ಲಾ ಪಂಚಾಯತ ಅಧ್ಯಕ್ಷರುಗಳಾದ ವಾಸಣ್ಣ ಕುರಡಗಿ, ಸಿದ್ದು ಪಾಟೀಲ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

### ಕಾನೂನು, ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲರಿಂದ ಪತ್ರಿಕಾಗೋಷ್ಠಿ

# ಬರ ಪರಿಹಾರ ವಿತರಣೆಗೆ ಶೀಘ್ರವೇ ಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ



ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಗೊಂಡಿದ್ದು, ಜಿಲ್ಲೆಯಲ್ಲಿ ಶೇ.92ರಿಂದ 98ರಷ್ಟು ಅರ್ಹರಿಗೆ ಸರ್ಕಾರದ ಗ್ಯಾರಂಟಿ ಯೋಜನೆಗಳು ತಲುಪಿವೆ. ವಿಶೇಷ ಪ್ರಯತ್ನ ಹಾಗೂ ತಂತ್ರಜ್ಞಾನದ ಬಳಕೆಯಿಂದಾಗಿ ಆಡಳಿತ ಪ್ರಾಮಾಣಿಕವಾಗಿ ಸಾಗುತ್ತಿದೆ ಎಂದು ಕಾನೂನು ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ನುಡಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಕಾರ್ಯಾಲಯದಲ್ಲಿ ಸೋಮವಾರ ಜರುಗಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಕಳೆದ ಸೆಪ್ಟೆಂಬರ್ 30ರಂದು ಜಿಲ್ಲೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 922 ಅರ್ಜಿಗಳು ಸ್ವೀಕೃತವಾಗಿದ್ದವು. ಗದಗ ತಾಲೂಕಿನ 675, ಗಜೇಂದ್ರಗಡ 18, ಲಕ್ಷ್ಮೇಶ್ವರ 97, ಮುಂಡರಗಿ 50, ನರಗುಂದ 13, ರೋಣ 38, ಶಿರಹಟ್ಟಿ ತಾಲೂಕಿನ 31 ಅರ್ಜಿಗಳು ಸ್ವೀಕೃತವಾಗಿದ್ದವು. ಜನತಾ ದರ್ಶನದಂದು ಸ್ವೀಕೃತವಾದ ಎಲ್ಲ ಅರ್ಜಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದ್ದು, ಕೆಲ ಅರ್ಜಿಗಳಿಗೆ ಹಿಂಬರಹವನ್ನು ನೀಡಿ ಅಗತ್ಯದ ದಾಖಲೆಗಳನ್ನು ಕ್ರೋಢೀಕರಿಸಿಕೊಳ್ಳಲು ಸೂಚನೆ ನೀಡಲಾಗಿದೆ. ಹಿಂಬರಹ ಒದಗಿಸಿದ ಅರ್ಜಿಗಳ ವಿಲೇವಾರಿಗೆ 10 ದಿನಗಳ ಸಮಯಾವಕಾಶವನ್ನು ನೀಡಲಾಗಿದ್ದು, ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಅಗತ್ಯದ ದಾಖಲೆಗಳನ್ನು ಕ್ರೋಢೀಕರಿಸಿ ಪರಿಶೀಲಿಸಿ ಅಂತಿಮ ಆದೇಶ ಹೊರಡಿಸಲು ಸೂಚನೆ ನೀಡಲಾಗಿದೆ.

ಹತ್ತು ದಿನಗಳ ನಂತರವು ಅರ್ಜಿಗಳ ವಿಲೇ ಆಗದೇ ಇದ್ದಲ್ಲಿ ಅರ್ಜಿದಾರರನ್ನು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಂವಾದ ಜರುಗಿಸಿ ಅಂತಿಮ ಹಂತಕ್ಕೆ ಒಯ್ಯಲಾಗುವದು. ಇಲ್ಲಿಯವರೆಗೆ ಒಟ್ಟು 951 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಇವುಗಳ ಪೈಕಿ 798 ಅರ್ಜಿಗಳನ್ನು ವಿಲೇ ಮಾಡಲಾಗಿದೆ ಮತ್ತು 153 ಅರ್ಜಿಗಳ ಬಾಕಿ ಉಳಿದಿರುತ್ತವೆ ಎಂದರು.

ಅಭಿವೃದ್ಧಿಗೆ ಅನುದಾನ: ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾಗಿದ್ದು, ಗದಗ ಜಿಲ್ಲೆಗೆ ಯು.ಜಿ.ಡಿ. ಕಾಮಗಾರಿ ವಿಸ್ತರಣೆಗಾಗಿ 30 ಕೋಟಿ ರೂ. ಅನುದಾನ ಹಾಗೂ ಜಲಮೂಲ ಪುನಶ್ಚೇತನ, ಉದ್ಯಾನವನ, ಹಸಿರಿಕರಣಕ್ಕಾಗಿ 30 ಕೋಟಿ ರೂ.ಗಳ ಅನುದಾನ ಮಂಜೂರಾಗಿದೆ ಎಂದು ತಿಳಿಸಿದರು.

### ಪ್ರಾಧಿಕಾರ ರಚನೆ

ನಗರದ ಹೃದಯಭಾಗದಲ್ಲಿನ 34.32 ಎಕರೆ ಭೂಮಿ ಲಭ್ಯವಿದ್ದು, ಈ ಸ್ಥಳ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುತ್ತಿದೆ. ಇದರ ಅನುಷ್ಠಾನಕ್ಕೆ ವಾಣಿಜ್ಯ, ಸಾಂಸ್ಕೃತಿಕ, ಪ್ರದರ್ಶನ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಯೋಜನೆಯ ಅನುಷ್ಠಾನಗೊಳಿಸಲು ಕಾನೂನು ಪ್ರಕಾರ ಕಾರ್ಯ ನಡೆದಿದೆ. ನಗರಕ್ಕೆ ಅವಶ್ಯಕವಿರುವ ಕೆಲಸ ಹಾಗೂ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಹಾಗೂ ಅಭಿವೃದ್ಧಿ ಕೈಗೊಳ್ಳಲು ಮುಂದಾಗಿದ್ದು, ಅದಕ್ಕಾಗಿ ವಿಶೇಷ ಒತ್ತು ನೀಡಲಾಗುತ್ತಿದೆ. ಅಭಿವೃದ್ಧಿ ಪ್ರಾಧಿಕಾರ ರಚನೆ ಕಾನೂನಾತ್ಮಕವಾಗಿ ಮಾಡಲು ನಿರ್ಣಯ ಕೈಗೊಳ್ಳಲಾಗುತ್ತಿದೆ. ಆದಷ್ಟು ಬೇಗ ಕೆಲಸ ಪ್ರಾರಂಭಿಸಲಾಗುವದು ಎಂದು ಸಚಿವರು ವಿವರಿಸಿದರು.

▸▸3 ನೇ ಪುಟಕ್ಕೆ

# ‘ವಿಳಂಬ’ ಭ್ರಷ್ಟಾಚಾರದ ಮತ್ತೊಂದು ರೂಪ

**■ ಜಿಲ್ಲಾ ಮಟ್ಟದಲ್ಲೇ ಬಗೆಹರಿಯಬೇಕಾದ ಸಮಸ್ಯೆಗಳು ಬೆಂಗಳೂರಿನವರೆಗೂ ಬರಕೂಡದು, ■ ಬಂದರೆ ನಿಮ್ಮಗಳ ವೈಫಲ್ಯ. ಇದನ್ನು ಸಹಿಸುವುದಿಲ್ಲ: ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮುಖ್ಯಮಂತ್ರಿ ಖಡಕ್ ಎಚ್ಚರಿಕೆ, ■ ಜನ ದುಡ್ಡು ಖರ್ಚು ಮಾಡಿಕೊಂಡು ಬೆಂಗಳೂರಿನವರೆಗೂ ಬಂದರೆ ನಿಮ್ಮ ವೈಫಲ್ಯ ಎಂದರ್ಥ, ■ ಅಭೂತಪೂರ್ವ ಜನ ಸ್ಪಂದನೆ ಬಳಿಕ ಅಧಿಕಾರಿಗಳಿಗೆ ಎಚ್ಚರಿಕೆ ರವಾನಿಸಿದ ಸಿಎಂ**

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಡೆಸಿದ ‘ಜನಸ್ಪಂದನ’ ಕಾರ್ಯಕ್ರಮಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಜನಸಾಗರವೆ ಹರಿದು ಬಂದಿತ್ತು.

ಮುಖ್ಯಮಂತ್ರಿಯ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ಬೆಳಗ್ಗೆ 10 ಗಂಟೆಯಿಂದ ಆರಂಭವಾದ ‘ಜನಸ್ಪಂದನ’ ಕಾರ್ಯಕ್ರಮದಲ್ಲಿ ಮಹಿಳೆಯರು, ವಿಕಲಚೇತನರು, ವೃದ್ಧರು ಸೇರಿದಂತೆ ಸಾವಿರಾರು ಜನರು ತಮ್ಮ ಅಹವಾಲುಗಳನ್ನು ಮುಖ್ಯಮಂತ್ರಿ ಎದುರು ಹೇಳಿಕೊಂಡರು.

ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಬಳಿಕ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇವತ್ತು ಜನಸ್ಪಂದನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಎರಡು ತಿಂಗಳ ಹಿಂದೆಯೇ ನಡೆಯಬೇಕಾಗಿತ್ತು.

ಎಲ್ಲ ಜಿಲ್ಲಾ ಸಚಿವರಿಗೆ ಪತ್ರ ಬರೆದಿದ್ದೆ, ಜಿಲ್ಲೆಗಳಲ್ಲಿ ಜನತಾ ಸ್ಪಂದನ ಕಾರ್ಯಕ್ರಮ ಮಾಡಿ ನನಗೆ ವರದಿ ಸಲ್ಲಿಸಬೇಕೆಂದು ತಿಳಿಸಲಾಗಿತ್ತು. ಕೆಲವು ಜಿಲ್ಲೆಗಳಿಂದ ಮಾತ್ರ ವರದಿ ಬಂದಿದೆ. ಉಳಿದ ಜಿಲ್ಲೆಗಳಿಂದ ವರದಿ ಬಂದಿಲ್ಲ. ಇದನ್ನು ಸಹಿಸಲ್ಲ ಎಂದರು.

ಜನತಾ ಸ್ಪಂದನ– ಅನೇಕ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಥಳದಲ್ಲಿ ಪರಿಹಾರ ನೀಡಲು ಸಾಧ್ಯವಾಗುತ್ತದೆ. ಕೆಲವು ಅರ್ಜಿಗಳು ಕೂಡಲೇ ತೀರ್ಮಾನ ಮಾಡಲು ಆಗೋದಿಲ್ಲ. ಸಮಯ ಬೇಕಾಗುತ್ತದೆ. ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಬೇಕು. ಇಲ್ಲವಾದರೆ ಬೆಳೆಯುತ್ತಲೇ ಹೋಗುತ್ತವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸೋಮವಾರ ಬಂದ ಅರ್ಜಿಗಳಲ್ಲಿ ಬಹುತೇಕವಾಗಿ ಕಂದಾಯ, ಪೊಲೀಸ್ ಇಲಾಖೆ, ಗೃಹಲಕ್ಷ್ಮಿ ಯೋಜನೆ, ಬಿಬಿಎಂಪಿ, ಪಿಂಚಣಿ, ಗ್ರಾಚ್ಯುಟಿ ಇತ್ಯರ್ಥ, ವಸತಿ ಕೊಡಿ, ಉದ್ಯೋಗ ಕೊಡಿಸಿ ಎಂಬ ಮನವಿಗಳು ಬಂದಿವೆ. ವಿಶೇಷವಾಗಿ ಅಂಗವಿಕಲರು ಉದ್ಯೋಗ ಕೊಡಿಸಿ, ತ್ರಿಚಕ್ರ ವಾಹನ ಕೊಡಿಸಿ ಎಂದು ಮನವಿ ಸಲ್ಲಿಸಿದ್ದಾರೆ.

> ಕೆಳಹಂತದ ಅಧಿಕಾರಿಗಳಿಗೆ ನೀವು ಕೂಡಲೇ ಸ್ಪಂದಿಸಬೇಕು. ಕನಿಷ್ಠ ಮೂರು ತಿಂಗಳಿಗೊಮ್ಮೆ ಜನತಾಸ್ಪಂದನ ಕಾರ್ಯಕ್ರಮ ಮಾಡುತ್ತೇನೆ. ಮುಂದಿನ ಬಾರಿ ಹೆಚ್ಚು ಜನ ಬಂದರೆ, ತಳಹಂತದ ಅಧಿಕಾರಿಗಳು ಕೆಲಸ ಸರಿಯಾಗಿ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುವುದು ಹಾಗೂ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿಗಳು.

▸▸3 ನೇ ಪುಟಕ್ಕೆ

### ‘ಸಶಕ್ತೀಕರಣ’ ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ವೀರಪ್ಪ ಮೋಯ್ಲಿ ಚಾಲನೆ

# ಸಂವಿಧಾನವನ್ನು ಸಮರ್ಥವಾಗಿ ಬಳಸುವ ವ್ಯಕ್ತಿಗಳು ನೀವಾಗಬೇಕು

■ ವಿಜಯಸಾಕ್ಷಿ ಸುದ್ದಿ, ಗದಗ



ಜಗತ್ತಿನಲ್ಲಿಯೇ ಶ್ರೇಷ್ಠ ಸಂವಿಧಾನ ಭಾರತದ ಸಂವಿಧಾನ. ಪ್ರಜೆಗಳಿಗೆ ಸಂವಿಧಾನವೇ ನಿಜವಾದ ಶಕ್ತಿಯಾಗಿದೆ. ಅದನ್ನು ಸಮರ್ಥವಾಗಿ ಅರಿತು ಬಳಸುವ ವ್ಯಕ್ತಿಗಳು ನೀವಾಗಬೇಕೆಂದು ಮಾಜಿ ಮುಖ್ಯ ಮಂತ್ರಿ ವೀರಪ್ಪ ಮೋಯ್ಲಿ ಅವರು ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಮತ್ತು ಕೆ.ಎಚ್. ಪಾಟೀಲ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ನಗರದ ಎಪಿಎಂಸಿ ಪ್ರಾಂಗಣದ ವಿವೇಕಾನಂದ ಸಭಾ ಭವನದಲ್ಲಿ ರವಿವಾರ ಏರ್ಪಡಿಸಿದ ‘ಸಶಕ್ತೀಕರಣ’ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಶ್ರೇಷ್ಠ ಸಂವಿಧಾನದ ಪೀಠಿಕೆಯನ್ನು ಸತತವಾಗಿ ಅರಿತು, ಮನನ ಮಾಡಿಕೊಂಡು, ಭಾರತದ ಪ್ರಜೆಗಳಾದ ನಾವೆಲ್ಲರೂ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಸಂವಿಧಾನ ಓದುವ ಸಶಕ್ತೀಕರಣ ಕಾರ್ಯಕ್ರಮಕ್ಕೆ ಆಗಮಿಸಿ ಉದ್ಘಾಟನೆ ನೆರವೇರಿಸಿರುವದು ನನ್ನಲ್ಲಿ ಧನ್ಯತಾ ಭಾವ ಮೂಡಿಸಿದೆ. ‘ಸಂವಿಧಾನ ಪೀಠಿಕೆ ಓದು’ ದೇಶದ ಪ್ರತಿ ಗ್ರಾಮ ಹಾಗೂ ಸಮುದಾಯಕ್ಕೆ ತಲುಪಬೇಕು ಎಂದರು.

ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ನೆರೆದ ಸಾರ್ವಜನಿಕರೆಲ್ಲರಿಗೂ ಸಂವಿಧಾನ ಪೀಠಿಕೆಯನ್ನು ಬೋಧಿಸಿ ಮಾತನಾಡಿ, ದೇಶದಲ್ಲಿ ಸಂವಿಧಾನದ ಓದು ನಮ್ಮಲ್ಲಿನ ಕರ್ತವ್ಯಗಳನ್ನು ಬಡಿದೆಬ್ಬಿಸಬೇಕು. ದೇಶದಲ್ಲಿನ ಸಂಪತ್ತಿನ ಹೆಚ್ಚು ಪಾಲು ಶೇ. 1ರಷ್ಟು ಜನರಲ್ಲಿ ಕ್ರೋಢೀಕರಣಗೊಂಡಿದೆ.

ದೇಶದ ಸಂಪತ್ತು ಒಂದು ವ್ಯಕ್ತಿ, ಸಮುದಾಯಕ್ಕೆ ಸೀಮಿತವಾಗದೇ ಸರ್ವರಿಗೂ ಸಲ್ಲಬೇಕು ಎಂದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ಸಂವಿಧಾನ ಪೀಠಿಕೆಯ ಪ್ರತಿಯನ್ನು ರಾಜ್ಯದ 73 ಸಾವಿರ ಶಾಲೆಗಳಲ್ಲಿ ಅಳವಡಿಸಲು ಹಾಗೂ ಸಂವಿಧಾನ ಪೀಠಿಕೆಯನ್ನು ಪ್ರತಿ ವಿದ್ಯಾರ್ಥಿಗಳಿಗೂ ಅರ್ಥೈಸುವ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

> ಸಂವಿಧಾನವನ್ನು ಅರ್ಥೈಸಿಕೊಂಡು ಸಂವಿಧಾನದಲ್ಲಿನ ಅಂಶಗಳನ್ನು ಸರಿಯಾದ ನಿಟ್ಟಿನಲ್ಲಿ ಬಳಸುವ ಕ್ರಮ ಆಗಬೇಕು. ಸಂವಿಧಾನದ ಓದು ಎಂಬ ಪರಿಷ್ಕೃತ ಆವೃತ್ತಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳವಾಗಿ ಪುಸ್ತಕದ ರೂಪದಲ್ಲಿ ತಲುಪಿಸಿದ್ದಾರೆ. ಗದಗ ಜಿಲ್ಲೆಯ 10 ಲಕ್ಷ ಜನರಿಗೂ ಸಂವಿಧಾನದ ಅರಿವು ಮೂಡಿಸಬೇಕು. ಅದು ಇಂದಿನಿಂದ ವರ್ಷವಿಡೀ ನಡೆಯಲಿದೆ.
>
> – ಎಚ್.ಕೆ. ಪಾಟೀಲ. ಜಿಲ್ಲಾ ಉಸ್ತುವಾರಿ ಸಚಿವರು.

> ಮೂಲಭೂತ ಹಕ್ಕು ಹಾಗೂ ಕರ್ತವ್ಯಗಳನ್ನು ಎಲ್ಲಿಯವರೆಗೆ ಪಾಲಿಸುವುದಿಲ್ಲವೋ ಅಲ್ಲಿಯ ವರೆಗೆ ನಾವು ರಾಷ್ಟ್ರದ ಸರಿಯಾದ ಪ್ರಜೆಗಳಲ್ಲ. ಸಂವಿಧಾನ ಕೇವಲ ನ್ಯಾಯವಾದಿಗಳ ಕೈಯಲ್ಲಿಲ್ಲ. ಕಕ್ಷಿದಾರನ ಕೈಯಲ್ಲಿಯೂ ಇದೆ ಎಂಬುದನ್ನು ಸಂದರ್ಭಕ್ಕನುಸಾರ ಸಾಬೀತುಪಡಿಸುತ್ತಲೇ ಇರಬೇಕು. ಅದುವೇ ನಮ್ಮ ಸಂವಿಧಾನ, ನಮ್ಮ ಹೆಮ್ಮೆ ಎಂದು ವೀರಪ್ಪ ಮೊಯ್ಲಿ ತಿಳಿಸಿದರು.

▸▸3 ನೇ ಪುಟಕ್ಕೆ

## ತಂಬಾಕು ನಿಯಂತ್ರಣ ಕಾಯ್ದೆ ಉಲ್ಲಂಘನೆ: ಕೋಟ್ಪಾ ದಾಳಿ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ ರಾಥೋಡ್ ಅವರ ಮಾರ್ಗದರ್ಶನದಲ್ಲಿ ನವೆಂಬರ್ ತಿಂಗಳಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ತನಿಖಾ ದಳ ಹಾಗೂ ತಾಲೂಕಾ ತಂಬಾಕು ನಿಯಂತ್ರಣ ತನಿಖಾ ದಳ ಗದಗ, ನಗರದ ತಿಲಕ್ ಪಾರ್ಕ್, ಹಳೆ ಬಸ್‌ನಿಲ್ದಾಣ ಹಾಗೂ ಬೆಟಗೇರಿ ನಗರದ ಕುರಹಟ್ಟಿಪೇಟೆಯಲ್ಲಿ ಕೋಟ್ಪಾ ದಾಳಿ ಹಮ್ಮಿಕೊಳ್ಳಲಾಯಿತು.

ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮ ಹಾಗೂ ತಂಬಾಕು ನಿಯಂತ್ರಣ ಕಾಯ್ದೆ ಕೋಟ್ಪಾ–2003ರ ಕುರಿತು ಸಾರ್ವಜನಿಕರಲ್ಲಿ ಹಾಗೂ ಅಂಗಡಿಕಾರರಲ್ಲಿ ಜಾಗೃತಿ ಮೂಡಿಸಲಾಯಿತು, ತಂಬಾಕು ಮುಕ್ತ ಯುವ ಪೀಳಿಗೆ ಮಾಡುವ ನಿಟ್ಟಿನಲ್ಲಿ ಶಾಲಾ–ಕಾಲೇಜು ಆವರಣದಿಂದ 100 ಗಜದವರೆಗೆ ತಂಬಾಕು ಮಾರಾಟ ನಿಷೇಧ, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧದ ಕುರಿತು ಪ್ರತಿಯೊಂದು ಸಾರ್ವಜನಿಕ ಸ್ಥಳಗಳಲ್ಲಿ ನಾಮಫಲಕ ಬಿತ್ತರಿಸುವದು ಅ ಸ್ಥಳದ ಮಾಲೀಕರ ಜಾವಾಬ್ದಾರಿಯಾಗಿರುತ್ತದೆ. ಕೆಲವು ವಸತಿ ಪ್ರದೇಶದಲ್ಲಿ ಧೂಮಪಾನ ಅಡ್ಡಾಗಳನ್ನು ಮಾಡಿಕೊಂಡಿರುವವರ ವಿರುದ್ಧ ಕೂಡಾ ಕ್ರಮ ವಹಿಸಲಾಯಿತು. ತಂಬಾಕು ಕುರಿತ ಜಾಹೀರಾತು ನಿಷೇದಿಸುವದು, 18 ವರ್ಷದೊಳಗಿನವರಿಗೆ ತಂಬಾಕು ನಿಷೇಧಿಸುವದು. ತಂಬಾಕು ಉತ್ಪನ್ನಗಳ ಪ್ಯಾಕ್ ಮೇಲೆ ಶೇ 85% ರಷ್ಟು ಅರೋಗ್ಯ ಎಚ್ಚರಿಕೆ ಚಿನ್ಹೆ ಕಡ್ಡಾಯ ಈ ಕುರಿತು ಮಾಹಿತಿ ಹಾಗೂ ಜಾಗೃತಿ ಮೂಡಿಸಿ ಉಲ್ಲಂಘನೆ ಮಾಡಿದವರ ವಿರುದ್ಧ ಎಚ್ಚರಿಕೆ ನೀಡಿ ಒಟ್ಟು 16 ಪ್ರಕರಣ ದಾಖಲಿಸಿ ರೂ. 2900/– ದಂಡ ಸಂಗ್ರಹಿಸಲಾಯಿತು.

ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಅದರ ಉಪಯೋಗ ಕೋಟ್ಪಾ ಕಾಯ್ದೆ ಅಡಿಯಲ್ಲಿ ಅವಕಾಶವಿದ್ದು ಅದನ್ನು ಉಲ್ಲಂಘಿಸಿದಲ್ಲಿ ಕಾನೂನು ರೀತಿ ಕ್ರಮ ವಹಿಸಲಾಗುವದು ಎಂದು ಎಚ್ಚರಿಕೆ ನೀಡಲಾಯಿತು.

ಈ ದಾಳಿಗಳಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರರಾದ ಗೋಪಾಲ ಸುರಪುರ, ಪಿ.ಎಸ್.ಐ ಹೆಚ್.ಕೆ.ಪಾಟೀಲ, ಸಿಬ್ಬಂಧಿಗಳಾದ ಸೋಮಶೇಖರ್, ಬಂಡಿವಡ್ಡರ್, ಆರೋಗ್ಯ ಇಲಾಖೆಯ ವೈ. ಎನ್.ಕಡೆಮನಿ ಹಾಗೂ ಎನ್.ಸಿ.ಜೋಶಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

## ಸಂಪಾದಕೀಯ

# ಜನತಾದರ್ಶನ ಕಾಂಗ್ರೆಸ್ಸಿನ ಮತ್ತೊಂದು ಗ್ಯಾರಂಟಿ ಆಗಲಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ತಮ್ಮ ಗೃಹ ಕಚೇರಿಯಲ್ಲಿ ಜನತಾದರ್ಶನ ನಡೆಸಿ, ರಾಜ್ಯದ ಬೇರೆ ಬೇರೆ ಭಾಗಗಳಿಂದ ಆಗಮಿಸಿದ್ದ ಜನಸಾಮಾನ್ಯರ ಸಮಸ್ಯೆಗಳನ್ನು ಆಲಿಸಿದರು. ಕೆಲ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಿದರು. ಇನ್ನುಳಿದ ಸಮಸ್ಯೆಗಳನ್ನ ಕಾಲಮಿತಿಯಲ್ಲಿ ಪರಿಹರಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ನಂತರ ಗ್ಯಾರಂಟಿ ಕಾರ್ಯಕ್ರಮಗಳ ಅನುಷ್ಠಾನದ ಪ್ರಗತಿಯ ಮಧ್ಯೆಯು ಜನತಾದರ್ಶನಕ್ಕೆ ಒಲವು ತೋರಿದರು. ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳು ಸಹ ಜನರ ಸಮಸ್ಯೆ ಆಲಿಸಲಿ ಎನ್ನುವ ಕಾರಣಕ್ಕೆ ಪ್ರತಿ ತಿಂಗಳು ಜನತಾದರ್ಶನ ನಡೆಸಲು ಸೂಚನೆ ನೀಡಿದರು.

ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಮೊದಲ ತಿಂಗಳು ಕೆಲವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಜನತಾದರ್ಶನ ನಡೆಸಿದರು. ಅದಾದ ನಂತರ ಮುಖ್ಯಮಂತ್ರಿಗಳು ಜನತಾದರ್ಶನ ಮರೆತರು ಜೊತೆಗೆ ಜಿಲ್ಲಾ ಉಸ್ತುವಾರಿಗಳು ಮುಖ್ಯಮಂತ್ರಿಯ ಹಾದಿಯಲ್ಲಿ ಸಾಗಿದರು.

ಸರಿಸುಮಾರು ಎರಡುವರೆ ತಿಂಗಳಗಳ ನಂತರ ಮುಖ್ಯಮಂತ್ರಿ ಮತ್ತೊಮ್ಮೆ ಜನತಾದರ್ಶನ ಏರ್ಪಡಿಸಿದರು. ಆದರೆ ಸಚಿವ ಸಂಪುಟದ ಯಾವೊಬ್ಬ ಸಚಿವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಜನತಾದರ್ಶನ ನಡೆಸುವ ಗೋಜಿಗೆ ಹೋಗಿಲ್ಲ.

ಜನರಿಂದ ಆಯ್ಕೆಯಾದವರು ಜನರ ಕಷ್ಟ ಅರಿಯಲು ಹಿಂದೇಟು ಹಾಕುತ್ತಿರುವುದು ಜನಸಾಮಾನ್ಯರ ಅಸಮಾಧಾನಕ್ಕೆ ಕಾರಣವಾಗಿದೆ. ಸಚಿವರ ಬಳಿ ತಮ್ಮ ಸಮಸ್ಯೆ ಹೇಳಿಕೊಂಡರೆ ಆದಷ್ಟು ಬೇಗ ಆ ಸಮಸ್ಯೆ ಪರಿಹಾರ ಆಗುತ್ತದೆ ಎಂದು ಲಕ್ಷಾಂತರ ಜನ ಕಾದು ಕುಳಿತಿದ್ದಾರೆ.

ಜನತಾದರ್ಶನದಲ್ಲಿ ಅಂತಹ ಅದೆಷ್ಟೋ ಸಮಸ್ಯೆಗಳು ಕ್ಷಣದಲ್ಲಿಯೇ ಪರಿಹಾರವಾಗಿ ಜನರಿಗೆ ನೆಮ್ಮದಿ ನೀಡಿದ ಅನೇಕ ಉದಾಹರಣೆಗಳಿವೆ. ಆದರೂ ಜನಪ್ರತಿನಿಧಿಗಳಿಗೆ ಜನರ ಅಹವಾಲು ಆಲಿಸಲು ಯಾಕಿಷ್ಟು ಅಸಡ್ಡೆ ಎನ್ನುವುದು ಅರ್ಥವಾಗುತ್ತಿಲ್ಲ.


ಕಾಂಗ್ರೆಸ್ 5 ಪ್ರಮುಖ ಗ್ಯಾರಂಟಿಗಳನ್ನ ನೀಡಿದ ಹಾಗೆ, ಜನತಾದರ್ಶನವನ್ನು ಮತ್ತೊಂದು ಗ್ಯಾರಂಟಿ ಕಾರ್ಯಕ್ರಮ ಎಂದು ಘೋಷಣೆ ಮಾಡಬೇಕು. ಒಂದು ನಿರ್ದಿಷ್ಟ ದಿನಾಂಕ ಮತ್ತು ಒಂದು ನಿರ್ದಿಷ್ಟ ದಿನದಂದು ಪ್ರತಿ ಜಿಲ್ಲೆಯಲ್ಲೂ ಜನತಾದರ್ಶನ ನಡೆಯುವಂತಾಗಬೇಕು. ಅಂದಾಗ ಮಾತ್ರ ಕಾಂಗ್ರೆಸ್ ಸರ್ಕಾರ ಬಡವರ ಪರವಾಗಿದೆ ಎನ್ನಬಹುದು.

### 'ಭುವನೇಶ್ವರಿಯ ತೇರ ಎಳೆದವರು-2'ರ ಲೋಕಾರ್ಪಣೆ ನಿಮಿತ್ತ ಪುಸ್ತಕ ವಿಮರ್ಶೆ

# ಭವಿಷ್ಯತ್ತಿನ ಸಂಗ್ರಹಯೋಗ್ಯ ಗ್ರಂಥ

ಕನ್ನಡಿಗರ ತಾಯಿ 'ಭುವನೇಶ್ವರಿ' ಎಂಬುದು ಒಂದು ಜನಪ್ರಿಯ ಪರಿಕಲ್ಪನೆ. ಇದನ್ನು ಸ್ವತಃ ಕನ್ನಡಿಗರೇ ರೂಪಿಸಿಕೊಂಡಿದ್ದು. ಈ ಪರಿಕಲ್ಪನೆಯ ಮೂಲ ವಿಜಯನಗರ ಸಾಮ್ರಾಜ್ಯ. ಅದಕ್ಕೂ ಮುನ್ನವೇ ಅಲ್ಲಲ್ಲಿ ಭುವನೇಶ್ವರಿ ಎಂಬ ದೇವಿಯ, ಶಕ್ತಿದೇವತೆಯ ಆರಾಧನೆ ನಡೆಯುತ್ತಿತ್ತು ಎಂಬುದು ತಿಳಿದುಬರುತ್ತದೆ. ಆದರೆ ಭುವನೇಶ್ವರಿ ನಾಡದೇವಿ ಎಂಬ ಪರಿಕಲ್ಪನೆ ಬರಬೇಕಾದರೆ ಮಹತ್ವದ ರಾಜಕೀಯ ಬದಲಾವಣೆ ಸಂಭವಿಸಬೇಕಾಯಿತು. 13ನೇ ಶತಮಾನದಲ್ಲಿ ಗುರು ವಿದ್ಯಾರಣ್ಯರು, ನಾಡನ್ನು ಅನ್ಯರ ಆಕ್ರಮಣದ ವಿರುದ್ಧ ಒಂದುಗೂಡಿಸುವ ಸಂಕಲ್ಪ ಮಾಡಿದರು. ಶಿಷ್ಯರಾದ ಹಕ್ಕ-ಬುಕ್ಕರಿಗೆ ಅದಕ್ಕಾಗಿ ದೀಕ್ಷೆ ನೀಡಿದರು. ಕನ್ನಡ ನಾಡಿನ ಜನರನ್ನು ಒಂದೇ ಮನಸ್ಸಂಕಲ್ಪದ ಅಡಿ ಸಜ್ಜಾಗಿಸಬೇಕಲ್ಲವೇ? ಅದಕ್ಕಾಗಿ ಭುವನೇಶ್ವರಿ ದೇವಿಯನ್ನು ನಾಡಿನ ಒಳಿತಿಗಾಗಿ ಒಗ್ಗೂಡಿ ಪ್ರಾರ್ಥಿಸುವ ರೂಢಿ ಆರಂಭಿಸಲಾಯಿತು.

ಭುವನಕ್ಕೆ ಈಶ್ವರಿಯಾದವಳು ಯಾರೋ ಅವಳೇ ಭುವನೇಶ್ವರಿ. ಅಂದರೆ ಈಕೆ ಬರೀ ನಮ್ಮ ನಾಡಿಗಲ್ಲ, ಇಡೀ ಭೂಮಂಡಲಕ್ಕೆ ತಾಯಿ ಎಂಬ ಭಕ್ತಿ ಭಾವ ಮೂಡಿತು. ನಮ್ಮ ಕವಿ-ಸಾಹಿತಿಗಳೂ ಇದಕ್ಕೆ ತಮ್ಮ ಕೊಡುಗೆ ನೀಡಿದರು. ಆಲೂರು ವೆಂಕಟರಾಯರು, ಬಿ.ಎಂ.ಶ್ರೀ, ಕುವೆಂಪು ಮೊದಲಾದವರು ತಮ್ಮ ಗದ್ಯ, ಕವನಗಳಲ್ಲಿ ಕನ್ನಡ ತಾಯಿ ಭುವನೇಶ್ವರಿಯನ್ನು




ಸ್ತುತಿಸಿರುವುದನ್ನು ಕಾಣುತ್ತೇವೆ. ಮುಂದೆ ಕನ್ನಡ ಹೋರಾಟಗಾರರು ತಾಯಿ ಭುವನೇಶ್ವರಿಯನ್ನು ಸ್ಥಾಪಿತ ರೂಪಕವಾಗಿ ಸ್ವೀಕರಿಸಿದರು. ತಮ್ಮನ್ನು ತಾವು ಶ್ರೀಗಂಧದಂತೆ ತೇಯ್ದು ನಾಡು-ನುಡಿಗೆ ಕೀರ್ತಿ ತಂದವರು ಈಶ್ವರಪ್ಪ ರೇವಡಿಯವರು. ಅವರು ಸಂಪಾದಿಸಿರುವ 'ಭುವನೇಶ್ವರಿಯ ತೇರ ಎಳೆದವರು' ಪುಸ್ತಕ ಕನ್ನಡ ನಾಡಿನ ಹಿರಿಮೆಯನ್ನು ಹೆಚ್ಚಿಸುವಂತಿದೆ.


ಬಹುಭಾಷಿಕ ಸಂವೇದನೆಯನ್ನು ಮೈಗೂಡಿಸಿಕೊಂಡಿರುವ ರೇವಡಿಯವರದು ಬಿಡುವರಿಯದ ಓದು ಹಾಗೂ ಬರವಣಿಗೆ. ನಮ್ಮ ಹಿಂದಿನ ತಲೆಮಾರಿನ ವಿದ್ವಾಂಸರು, ಕವಿಗಳಲ್ಲಿರುವಂತೆ ಆಳವಾದ ಚಿಂತನ-ಮಂಥನನಗಳಿಂದ, ವಿಚಾರ ವಿಮರ್ಶೆಗಳಿಂದ ಅವರ ಯೋಚನೆಗಳು ಅನೇಕ ದೃಷ್ಟಿಯಿಂದ ನಮ್ಮ ಗಮನಸೆಳೆಯುತ್ತದೆ. ನಮ್ಮ ಸಾಹಿತ್ಯ ಶಕ್ತಿ ಪರಿಪಕ್ವವಾಗುವ ಪರಿಸರವನ್ನು ನಿರ್ಮಿಸಲು ಅವರು ಮಹತ್ವದ ಯೋಗದಾನವನ್ನು ನೀಡಿದ್ದಾರೆ. ಜಾಗತಿಕ ಸಾಹಿತ್ಯವನ್ನು ಓದಿ ಅನುಭವಿಸಿ ಅಲ್ಲಿನ ವೈವಿಧ್ಯಮಯ ಅನುಭವವನ್ನು ಕನ್ನಡ ಸಹೃದಯರಿಗೆ ಭಾಷಾಂತರದ ಮೂಲಕ ಮೊಗೆ ಮೊಗೆದು ಕೊಟ್ಟ ಶ್ರೇಯಸ್ಸು ಶ್ರೀಯುತರಿಗೆ ಸಲ್ಲುತ್ತದೆ.

ತಮ್ಮ ಕಾಯಕದ ಜೊತೆಗೆ ಸಾಹಿತ್ಯ ಸೇವೆ ತಮ್ಮ ಉಸಿರಾಗಿಸಿಕೊಂಡು ತಮ್ಮ ಸಲಹಾ ಮಂಡಳಿ ಕಟ್ಟಿಕೊಂಡು, ಕ್ರಿಯಾಶೀಲ ಸಂಪನ್ಮೂಲ ತಂಡದ ಜೊತೆಗೆ ಶ್ರೇಷ್ಠ ಕೃತಿಗಳು, ನಾಟಕ ಪ್ರದರ್ಶನ, ಪ್ರಕಾಶನದ ಪ್ರಕಟಣೆಗಳು, ವರ್ಣರಂಜಿತ ಛಾಯಾಚಿತ್ರಗಳು, ಅನೇಕ ದತ್ತಿ ಉಪನ್ಯಾಸಗಳನ್ನು ಹಾಗೂ ಸಾಹಿತ್ಯ ಚಿಂತನ ಗೋಷ್ಠಿಗಳನ್ನು ಸಂಘಟಿಸಿದರು. ಇಲ್ಲಿನ ಅನೇಕ ಲೇಖನಗಳು ಓದುಗರನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತವೆ.

ಪ್ರಧಾನ ಸಂಪಾದಕರಾಗಿ ಕೆಲಸ ನಿರ್ವಹಿಸಿದ ದಿ. ಈಶ್ವರಪ್ಪ ರೇವಡಿ ಗುರುಗಳಿಗೆ ಹೆಗಲಿಗೆ ಹೆಗಲು ಕೊಟ್ಟು ಸಂಪಾದಕರಾಗಿ ಕೆಲಸ ನಿರ್ವಹಿಸಿದ ಮಾರ್ಗದರ್ಶಕರಾದ ಎಂ.ಎಸ್. ಮಕಾನದಾರ ಹಾಗೂ ಪ್ರೊ. ಬಸವರಾಜ ಮುನವಳ್ಳಿಯವರ ನೇತೃತ್ವದಲ್ಲಿ ಭುವನೇಶ್ವರಿಯ ತೇರು ಎಳೆದವರು ಸಂಪುಟ-2 ರ ಮುಖಪುಟ ವಿನ್ಯಾಸವು ಎಲ್ಲರನ್ನು ಆಕರ್ಷಿತರನ್ನಾಗಿ ಮಾಡಿದೆ.

ಇಂತಹ ಸಾಹಿತ್ಯದ ಕಾರ್ಯಕ್ರಮಗಳು ಈ ಕಾಲಘಟ್ಟದಲ್ಲಿ ನಮ್ಮೆಲ್ಲರಿಗೂ ಸಾಹಿತ್ಯದ ರಸದೌತಣವನ್ನು ಉಣಬಡಿಸಿ, ತಾಯಿ ಭುವನೇಶ್ವರಿ ದೇವಿಯ ಸೇವೆ ಮಾಡಲು ಸನ್ನದ್ಧರನ್ನಾಗಿ ಮಾಡಿದ್ದಾರೆ. ನಮ್ಮ ಜಿಲ್ಲೆಯ ಗಂಡು ಮೆಟ್ಟಿನ ರೋಣ-ಗಜೇಂದ್ರಗಡದ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಾಳುಗಳಿಗೆ ಅಭಿಮಾನದ ಅಭಿನಂದನೆಗಳು.

ಪ್ರಸ್ತುತ ದಿನಮಾನದಲ್ಲಿ ಎಲ್ಲಾ ಶಾಲಾ ಕಾಲೇಜು ವಿದ್ಯಾರ್ಥಿಗಳು ಈ ಗ್ರಂಥ ಮಾಲಿಕೆಯನ್ನು ಸಂಗ್ರಹಿಸಿಟ್ಟುಕೊಂಡು ಭವಿಷ್ಯತ್ತಿನ ಯಶಸ್ವಿಗಾಗಿ ಬಳಕೆಗೆ ಅತ್ಯುತ್ತಮವಾಗಿದೆ.



– ಎಂ.ಎಚ್. ಸವದತ್ತಿ
ಸಹ ಶಿಕ್ಷಕರು, ಸರಕಾರಿ ಪ್ರೌಢಶಾಲೆ, ಏಕಲಾಸಪೂರ.

# ಬದುಕಿನ ಅನುಭವ ಇಲ್ಲದವ ಕವಿ ಆಗಲಾರ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಕವಿ ಆಗಲು ಅನುಭವ ಮುಖ್ಯ. ಅನುಭವ ಇಲ್ಲದವ ಎಂದಿಗೂ ಕವಿ ಆಗಲಾರ. ಇದಕ್ಕೆ ಡಾ. ದ.ರಾ. ಬೇಂದ್ರೆಯವರೇ ಸಾಕ್ಷಿ. ಜೀವನದ ಗಟ್ಟಿ ಅನುಭವಗಳನ್ನು ಅವರಷ್ಟು ಹೆಕ್ಕಿ ತೆಗೆದವರು ಯಾರೂ ಇಲ್ಲ ಎಂದು ಇಲಕಲ್ಲದ ಸರಕಾರಿ ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕ ಆರೀಫ್ ರಾಜಾ ಹೇಳಿದರು.

ನಿಡಗುಂದಿ ಗ್ರಾಮದ ಡಾ. ವೀರಪ್ಪ ಸಂಕನೂರ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಗಜೇಂದ್ರಗಡ ಕಸಾಪ ತಾಲೂಕಾ ಘಟಕದ ವತಿಯಿಂದ ಇತ್ತೀಚೆಗೆ ಹಮ್ಮಿಕೊಂಡಿದ್ದ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ, ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮ-50ರ ವಿಶೇಷ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.




ನಿಡಗುಂದಿ ಧರ್ಮರ ಮಠದ ಷಣ್ಮುಖಪ್ಪಜ್ಜನವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸರಕಾರಿ ಪಿ.ಯು. ಕಾಲೇಜಿನ ಪ್ರಭಾರಿ ಪ್ರಾಚಾರ್ಯ ಎಸ್.ಆರ್. ಕರಮುಡಿ ಉದ್ಘಾಟಿಸಿದರು. ಗಜೇಂದ್ರಗಡ ಕಸಾಪ ತಾಲೂಕಾಧ್ಯಕ್ಷ ಅಮರೇಶ ಗಾಣಿಗೇರ ಅಧ್ಯಕ್ಷತೆ ವಹಿಸಿದ್ದರು. ಶರಣಪ್ಪ ಅರಮನಿ, ಸಂದೇಶ ದೊಡ್ಡಮೇಟಿ, ವಿ.ಆರ್. ಗೆದಗೇರಿ, ಎಮ್.ಬಿ. ಕೊಪ್ಪದ, ಎಚ್.ಬಿ. ಕಟ್ಟಿಮನಿ, ಕಸಾಪ ಸಂಚಾಲಕ ಆರ್.ಕೆ. ಬಾಗವಾನ್, ಜಿ.ಮ್ಯಾಕಲ್, ಕಥೆಗಾರ ಟಿ.ಎಸ್. ಗೊರವರ್, ಚಿತ್ರ ಕಲಾವಿದರು ಪುಡಂಲೀಕ ಕಲ್ಲಿಗನೂರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

### 'ವಿಧಾನಮಂಡಲದ ವರದಿಗಾರಿಕೆ' ಪುಸ್ತಕ ಬಿಡುಗಡೆಗೊಳಿಸಿದ ಸಭಾಪತಿ ಹೊರಟ್ಟಿ

# ವಿಧಾನಮಂಡಲ ವರದಿಗಾರಿಕೆಗೆ ಎದೆಗಾರಿಕೆ ಬೇಕು



■ವಿಜಯಸಾಕ್ಷಿ ಸುದ್ದಿ, ಶಿರಗುಪ್ಪ

ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಕಾರ್ಯಕಲಾಪಗಳ ವರದಿಗಾರಿಕೆಗೆ ಎದೆಗಾರಿಕೆ ಮತ್ತು ಇಚ್ಛಾಶಕ್ತಿ ಬೇಕು ಎಂದು ಸಭಾಪತಿ ಬಸವರಾಜ್ ಹೊರಟ್ಟಿಯವರು ಅಭಿಪ್ರಾಯಪಟ್ಟರು.

ಅವರು ಶಿರಗುಪ್ಪ ತಾಲೂಕಿನ ಸಿರಿಗೇರಿ ಹೋಬಳಿ ಗ್ರಾಮದಲ್ಲಿ ಸಿರಿಗೇರಿಯ ಅನ್ನಪೂರ್ಣ ಪ್ರಕಾಶನದವರು ಹಿರಿಯ ಚಿಂತಕ, ಲೇಖಕ ಡಾ. ಈಶ್ವರ್ ದೈತೋಟ ರಚಿಸಿರುವ ಹೊತ್ತಿಗೆಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ವಿಧಾನ ಮಂಡಲಗಳ ಪ್ರತಿಯೊಂದು ಚರ್ಚೆಗಳು ದಾಖಲೀಕರಣಗೊಳ್ಳುತ್ತಿವೆ. ಇಂಥ ಸಂದರ್ಭದಲ್ಲಿ ವರದಿಗಾರರು ಸತ್ಯಕ್ಕೆ ದೂರವಾದ ವರದಿಯನ್ನ ಪ್ರಕಟಿಸಿದರೆ ಸಂಬಂಧಿಸಿದ ಶಾಸಕರು ಅಂತವರ ಮೇಲೆ ತಮಗಿರುವ ಹಕ್ಕನ್ನ ಬಳಸಿಕೊಂಡು ಹಕ್ಕುಚ್ಯುತಿ ಮಂಡಿಸುವ ಅವಕಾಶವನ್ನು ಹೊಂದಿದ್ದಾರೆ. ಹೀಗಾಗಿ ವಿಧಾನ ಮಂಡಲಗಳ ವರದಿಗಾರರು ಅಲ್ಲಿರುವ ಚರ್ಚಿತ ಸುದ್ದಿಗಳನ್ನೇ ಪ್ರಕಟಿಸಬೇಕಾಗುತ್ತದೆ. ಕೆಲ ಬಾರಿ ಆತ್ಮ ಸಾಕ್ಷಿ ಒಪ್ಪದಿದ್ದರೂ ಅನಿವಾರ್ಯತೆ ಈ ವರದಿಗಾರರಿಗೆ ಇರುತ್ತದೆ. ಹೀಗಾಗಿ, ವಿಧಾನಮಂಡಲಗಳ ವರದಿಗಾರಿಕೆ ಒಂದು ರೀತಿ ವರದಿಗಾರರಿಗೆ ಪರೀಕ್ಷೆಕಾಲ ಎಂದು ಹೇಳಿದರು.

ಲೇಖಕರಾದ ಡಾ. ಈಶ್ವರ್ ದೈತೋಟ ಅವರು ಮಾತನಾಡಿ, ಕರ್ನಾಟಕ ವಿಧಾನ ಮಂಡಲಕ್ಕೆ ತನ್ನದೇ ಆದ ಭವ್ಯವಾದ ಇತಿಹಾಸವಿದೆ. ವಿಧಾನಸಭೆ ಹಾಗು ವಿಧಾನ ಪರಿಷತ್ತಿನ ಕಾರ್ಯ ಕಲಾಪಗಳ ವರದಿ ಒಬ್ಬ ಪತ್ರಕರ್ತನಿಗೆ ನಿಜವಾಗಲೂ ಒಂದು ಸವಾಲೇ ಸರಿ. ವಾಸ್ತವ ನೆಲೆಯಲ್ಲಿ ಒಂದು ಸದನದ ಕಾರ್ಯ ಕಲಾಪಗಳ ವಿಶ್ಲೇಷಣೆಯನ್ನು ಕೂಡ ಜನಸಾಮಾನ್ಯರು ಗಮನಿಸುತ್ತಿರುತ್ತಾರೆ. ಇಂತಹ ಮಹತ್ತರ ವಿಷಯವನ್ನು ಕುರಿತು ಈಗಾಗಲೇ ಹಿಂದೆ ಕರ್ನಾಟಕ ಮಾಧ್ಯಮ ಅಕಾಡೆಮಿಯು ಈ ಹೊತ್ತಿಗೆಯನ್ನು ಪ್ರಕಟಿಸುವ ಜವಾಬ್ದಾರಿಯನ್ನು ಹೊತ್ತಿತ್ತು. ಸದರಿ ಹೊತ್ತಿಗೆಗೆ ತಮ್ಮ ಶುಭಕಾಮನೆ ನೀಡಿ ಲೋಕಾರ್ಪಣೆಗೊಳಿಸಿದ ಸಭಾಪತಿ ಬಸವರಾಜ್ ಹೊರಟ್ಟಿ ಅವರಿಗೆ ಧನ್ಯವಾದಗಳು ಎಂದರು.

ಅನ್ನಪೂರ್ಣ ಪ್ರಕಾಶನದ ಸಿರಿಗೇರಿ ಎರಿಸ್ವಾಮಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ನಾಲ್ಕು ದಶಕಗಳ ಕಾಲವಿಧಾನ ಪರಿಷತ್ತಿನ ಅನುಭವ ಹೊಂದಿದ ಸಭಾಪತಿ ಬಸವರಾಜ್ ಹೊರಟ್ಟಿ ಅವರಿಂದ ಈ ಪುಸ್ತಕ ಲೋಕಾರ್ಪಣೆಗಳುತ್ತಿರುವುದು ಹೆಮ್ಮೆಯ ಸಂಗತಿ. ಈ ಪುಸ್ತಕ ವಿಧಾನ ಮಂಡಲದ ಪ್ರತಿಯೊಂದು ಸಂಗತಿಗಳನ್ನು ತೆರೆದಿಟ್ಟಿದೆ. ಇದೊಂದು ಮಾರ್ಗದರ್ಶಿ ಪುಸ್ತಕವಾಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಗದುಗಿನ ಶಿಕ್ಷಣ ತಜ್ಞರಾದ ಡಾ. ಬಸವರಾಜ್ ಧಾರವಾಡ, ಸಿರಿಗೇರಿ ಗ್ರಾ.ಪಂ ಅಧ್ಯಕ್ಷೆ ಲಕ್ಷ್ಮೀ ದ್ಯಾವಣ್ಣ, ಉಪಾಧ್ಯಕ್ಷೆ ರಾಜಮ್ಮ ಹುಲಗಪ್ಪ, ನಾಗನಾಥೇಶ್ವರ ದೇವಾಲಯದ ಧರ್ಮ ಕರ್ತರಾದ ಮಾರುದ್ರ ಗೌಡ ಸೇರಿದಂತೆ ಗ್ರಾಮದ ಗುರು-ಹಿರಿಯರು ಭಾಗವಹಿಸಿದ್ದರು.

# ದಿ. ರಜನಿ ಕೊಪ್ಪರ್‌ರ ಜನ್ಮದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಕೊಪ್ಪರ್ ಅಕಾಡೆಮಿಯಲ್ಲಿ ರಜನಿ ಕೊಪ್ಪರ್ ಅವರ ಜನ್ಮದಿನಾಚರಣೆ ಹಾಗೂ ಸ್ಮರಣೆ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಮಾತನಾಡಿದ ಅಮೀರ್ ನಾಯಕ, ರಜನಿ ಕೊಪ್ಪರ್ ಅವರು ಇಂದು ಬದುಕಿದ್ದರೆ ಬಿಜೆಪಿ ರಾಜ್ಯಮಟ್ಟದ ನಾಯಕಿಯಾಗಿ ಮಿಂಚುತ್ತಿದ್ದರು ಎಂದು ಅಭಿಪ್ರಾಯಪಟ್ಟರು.

ಪ್ರೊ. ರವೀಂದ್ರ ಕೊಪ್ಪರ್-ರಜನಿ ಕೊಪ್ಪರ್ ಅವರ ಪುತ್ರ ಶ್ರೀಕಾಂತ್ ಕೊಪ್ಪರ್ ಮಾತನಾಡಿ, ತಂದೆ-ತಾಯಿಗಳ ಹೆಸರಿನಲ್ಲಿ ಕೊಪ್ಪರ್ ಸರ್ ತಂಡವನ್ನು ಮಾಡಲಿದ್ದೇವೆ. ಈ ತಂಡದಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ



ಇಂಗ್ಲೀಷ್ ಸ್ಪೋಕನ್ ತರಬೇತಿ, ಆನ್‌ಲೈನ್ ವಂಚನೆ ಬಗ್ಗೆ ವಿಡಿಯೋಗಳು, ಆಯುರ್ವೇದ ಜಾಗ್ರತಿ ಹೀಗೆ ಹತ್ತು ಹಲವು ಸಮಾಜ ಸೇವೆಗಳನ್ನು ಮಾಡುವ ಉದ್ದೇಶವಿದೆ ಎಂದರು.

ಇನ್ನೋರ್ವ ಪುತ್ರ ರಘು ಕೊಪ್ಪರ್, ಹಿರಿಯರಾದ ಶಾಂತಪ್ಪ ಹೂಗಾರ್ ಮಾತನಾಡಿದರು. ಕೊಪ್ಪರ್ ಸರ್ ತಂಡದ ಸಾರಥ್ಯವನ್ನು ಶ್ರೀಕಾಂತ್ ಕೊಪ್ಪರ್ ವಹಿಸಿದರೆ, ಮುರಾಧ ಖಾನ್, ಪಿಡಿಒ ಅಮೀರ್ ನಾಯಕ, ಶಾಂತಪ್ಪ ಹೂಗಾರ್, ವಾಯ್.ಎಸ್. ಭಜಂತ್ರಿ, ಶಿಕ್ಷಕ ಪಂಚಯ್ಯ ಹಿರೇಮಠ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವರು.

ಈ ಸಂದರ್ಭದಲ್ಲಿ ಸಂಗಮೇಶ ವ್ಯಾಪಾರಿ, ಸುನೀಲ ಹಲಕುರ್ಕಿ, ಪ್ರಕಾಶ ನಿಡಗುಂದಿ, ದಯಾನಂದ ತಡಸದ, ತರಸಾಲೆಪ್ಪ, ಶರಣು, ರಾಕೇಶ ಇನ್ನಿತರರು ಉಪಸ್ಥಿತರಿದ್ದರು.

# ಎತ್ತಿನ ಬಂಡಿಗೆ ಹಿಂಬದಿಯಿಂದ ಗುದ್ದಿದ ಬಸ್

■ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿ ನಗರದಿಂದ ಡಂಬಳ ಮಾರ್ಗವಾಗಿ ಮುಂಡರಗಿಗೆ ಹೋಗುವ ಸಾರಿಗೆ ಬಸ್ ರವಿವಾರ ರಾತ್ರಿ ಅತ್ತಾರ ಜಂದಿಸಾಬ ಕೆರೆಯ ಬಳಿ ತಾಂಬೋಟಿಯವರ ಜಮೀನಿನ ಬಳಿಯ ಮುಖ್ಯ ರಸ್ತೆಯ ಹತ್ತಿರ ಎತ್ತಿನ ಬಂಡಿ ಮೂಲಕ ಈರುಳ್ಳಿ ಹೇರಿಕೊಂಡು ತಮ್ಮ ಜಮೀನಿಗೆ ತೆರಳುತ್ತಿರುವಾಗ ಹಿಂಬದಿಯಿಂದ ಹಾಯ್ದ ಪರಿಣಾಮವಾಗಿ ಮುರ್ತುಜಾ ತಾಂಬೋಟಿ (52), ಆಶಾ ತಾಂಬೋಟಿ(45) ಹಸೀನಾ ತಾಂಬೋಟಿ (21) ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಗಾಯಾಳುಗಳನ್ನು ಚಿಕಿತ್ಸೆಗಾಗಿ ತಕ್ಷಣ ಗದಗ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಎರಡು ಎತ್ತುಗಳಿಗೂ ಗಂಭೀರ




ಗಾಯಗಳಾಗಿದ್ದು, ಎತ್ತಿನ ಬಂಡಿ ಸಂಪೂರ್ಣ ಹಾಳಾಗಿ, ಈರುಳ್ಳಿ ರಸ್ತೆ ತುಂಬೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು.

ಸ್ಥಳಕ್ಕೆ ಡಂಬಳ ಪೊಲೀಸ್ ಹೊರಠಾಣೆಯ ಎಎಸ್‌ಐ ವೀರಭದ್ರಪ್ಪ ತಂತ್ರೆ, ಬಸುರಾಜ ಬಣಕಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆಗೆ ಸಂಬಂಧಿಸಿ ಮುಂಡರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### 'ಅನುಭಾವ ಶರಧಿ' ಕೃತಿ ಬಿಡುಗಡೆ ಸಮಾರಂಭದಲ್ಲಿ ಡಾ. ಸುಜ್ಞಾನದೇವ ಶಿವಾಚಾರ್ಯರು

# ಅಮೃತದ ಸಾರವಿರುವ ಪುಸ್ತಗಳನ್ನು ಓದಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪುಸ್ತಕಗಳು ಅಜ್ಞಾನದ ಅಂಧಕಾರ ಕಳೆಯುವುದರೊಂದಿಗೆ ಬದುಕಿನ ದಾರಿದೀಪಗಳಾಗಿವೆ. ಕವಿಗಳು, ಸಾಹಿತಿಗಳು, ವಚನಕಾರರು ಬದುಕಿನ ಅಮೃತದ ಸಾರವನ್ನು ಉಣಬಡಿಸುವ ಪುಸ್ತಗಳನ್ನು ಓದಬೇಕು ಎಂದು ಬನ್ನಿಕೊಪ್ಪ/ಮೈಸೂರಿನ ಜಪದಕಟ್ಟಿಮಠದ ಡಾ. ಸುಜ್ಞಾನದೇವ ಶಿವಾಚಾರ್ಯರು ಹೇಳಿದರು.

ಅವರು ಭಾನುವಾರ ಪಟ್ಟಣದ ಎಸ್‌ಬಿಐ ಮಹಡಿಯಲ್ಲಿ ಕಸಾಪ, ಆದಿಶಕ್ತಿ ಸಾಹಿತ್ಯ ವೇದಿಕೆ, ಪ್ರೇಮಕ್ಕ ಅಭಿಮಾನಿ ಬಳಗದಿಂದ ಹಮ್ಮಿಕೊಳ್ಳಲಾಗಿದ್ದ ಸಾಹಿತಿ, ಶಿಕ್ಷಕಿ ಮೈತ್ರಾದೇವಿ ರಾಚಯ್ಯ ಹಿರೇಮಠ ಅವರು ರಚಿಸಿದ 'ಅನುಭಾವ ಶರಧಿ' ಕೃತಿ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ ಮಾತನಾಡಿ, ಶಿಕ್ಷಣ, ಪ್ರವಚನ, ಸಾಹಿತ್ಯ, ಆಧ್ಯಾತ್ಮ ಮತ್ತು ಸಂಸ್ಕಾರಯುತ ಕುಟುಂಬದ ಮೂಲ ಹೊಂದಿದ್ದರಿಂದಲೇ ಪ್ರಸ್ತುತ ಸಂದರ್ಭದಲ್ಲಿಯೂ ಕವಯಿತ್ರಿ ಮೈತ್ರಾದೇವಿ




ಹಿರೇಮಠ ಅವರಿಂದ ಬದುಕಿನ ಮೌಲ್ಯಗಳ ಸಾರಸಂಗ್ರಹ ಕೃತಿ ಹೊರಬರಲು ಸಾಧ್ಯವಾಗಿದೆ ಎಂದರು.

ಮೈತ್ರಾದೇವಿ ಹಿರೇಮಠ ಮಾತನಾಡಿ, ಸಂಸ್ಕಾರಯುತ ಶಿಕ್ಷಣದ ಜ್ಞಾನ ಮತ್ತು ಆಧ್ಯಾತ್ಮದ ಒಲವಿಂದ ರಚಿತವಾದ ನನ್ನ ಪುಸ್ತಕ ಅಂತರಂಗದ ಬದುಕಿಗೆ ನೆಮ್ಮದಿ ನೀಡುತ್ತವೆ. ಸಮಾಜದ ಉತ್ತಮ ಬದಲಾವಣೆಗೆ ನನ್ನ ವಚನಗಳು ಔಷಧಿಯಾದಾವು ಎಂಬ ಸಣ್ಣ ಆಸೆ ನನ್ನದು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ. ಸಾಲಿಮಠ, ಜಿ.ಎಂ. ಮುಂದಿನಮನಿ, ಸಾಹಿತಿ ಸಿ.ಜೆ. ಹಿರೇಮಠ ಮಾತನಾಡಿದರು. ಶಿಕ್ಷಣಾಧಿಕಾರಿಗಳ ಸಂಘದ ತಾಲೂಕಾಧ್ಯಕ್ಷ ಎಂ.ಬಿ. ಹೊಸಮನಿ, ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ, ಸಾಹಿತಿ ನಾಗರಾಜ ಹುಣಸಿಕಟ್ಟಿ, ಸಾಹಿತಿಗಳಾದ ಗಣಪತಿ ಹೆಗಡೆ, ನಿರ್ಮಲಾ ಅರಳಿ, ಸಿ.ಶಿವಾನಂದ, ಕೆ.ಎರಿಬಸಪ್ಪ, ಮಂಜುನಾಥ ಚಾಕಲಬ್ಬಿ, ನಿರ್ಮಲಾ ಅರಳಿ, ಪಂಚಾಕ್ಷರಯ್ಯ ಸಾಲಿಮಠ ಸೇರಿ ಸಾಹಿತಿಗಳು, ಶಿಕ್ಷಕರು ಪಾಲ್ಗೊಂಡಿದ್ದರು.

ಡಾ.ಅನ್ನಪೂರ್ಣ ಹಿರೇಮಠ, ಭುವನಾ ಹಿರೇಮಠ ಸಹೋದರಿಯರು ನಿರ್ವಹಿಸಿದರು. ಶಾರದಾ ಸ್ವರಾಂಜಲಿ ಸಂಗೀತ ಪಾಠಶಾಲೆ ವಿದ್ಯಾರ್ಥಿಗಳಿಂದ ಸಂಗೀತ ಸೇವೆ ನೆರವೇರಿತು.

# 'ವಿಳಂಬ' ಭ್ರಷ್ಟಾಚಾರದ ಮತ್ತೊಂದು ರೂಪ

▶▶ಮೊದಲನೇ ಪುಟದಿಂದ

4000 ತ್ರಿಚಕ್ರ ವಾಹನ ಒದಗಿಸಲಾಗಿದೆ. ವಿಶೇಷವಾಗಿ ಜಿಲ್ಲಾಧಿಕಾರಿಗಳು ಸ್ಥಳೀಯವಾಗಿಯೇ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತದೆ. ಖಾತೆ, ಪಹಣಿ, ಪೋಡಿ ಮಾಡಲು ನನ್ನ ಬಳಿ ಬರಬೇಕಾ? ಎಂದರಲ್ಲದೇ ಜಿಲ್ಲಾಧಿಕಾರಿಗಳು, ತಹಸೀಲ್ದಾರರು, ಉಪವಿಭಾಗಾಧಿಕಾರಿಗಳು ಕೆಲಸ ಮಾಡಿದರೆ ಜನರು ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ ಎಂದರು.

ಕಟ್ಟುನಿಟ್ಟಿನ ಸೂಚನೆಯನ್ನು ಎಲ್ಲ ಜಿಲ್ಲಾಧಿಕಾರಿಗಳಿಗೆ ನೀಡುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚಿಸಿದ್ದೇನೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಆಸ್ಪತ್ರೆ, ಪೊಲೀಸ್ ಠಾಣೆ, ಹಾಸ್ಟೆಲುಗಳು ಮತ್ತಿತರ ಸ್ಥಳಗಳಿಗೆ ಭೇಟಿ ನೀಡಬೇಕು. ಜನರ ಸಮಸ್ಯೆ ಬಗೆಹರಿಸಬೇಕು. ವಿಳಂಬ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ಕೂಡಲೇ ಜನರಿಗೆ ಸ್ಪಂದಿಸಲು ಸೂಚಿಸಿದರು. ಕಾನೂನು ರೀತ್ಯ ಮಾಡಲು ಸಾಧ್ಯವಾಗದಿದ್ದರೆ, ಹಿಂಬರಹ ನೀಡಬೇಕು.

ಇಂದು ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದು. ಹದಿನೈದು ದಿನದೊಳಗೆ ಇವುಗಳನ್ನು ವಿಲೇವಾರಿ ಮಾಡಬೇಕು. ನಿಯಮಾವಳಿಗಳಡಿ ಅವಕಾಶವಿಲ್ಲದೆ ಇದ್ದರೆ, ಹಿಂಬರಹ ನೀಡಬೇಕು. ಇಂದು ಮೂರುವರೆ ಸಾವಿರ ಅರ್ಜಿ ಸ್ವೀಕರಿಸಲಾಗಿದೆ. ಇವುಗಳನ್ನು ಪರಿಶೀಲಿಸಿ, ಕಾನೂನು ರೀತ್ಯ ಪರಿಹಾರ ನೀಡಬೇಕು. ಸಾಧ್ಯವಾಗದಿದ್ದರೆ ಹಿಂಬರಹ ನೀಡಬೇಕು. ತಳಹಂತದ ಅಧಿಕಾರಿಗಳು ಅರ್ಜಿಯನ್ನು ಇತ್ಯರ್ಥಪಡಿಸಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ಮುಖ್ಯಮಂತ್ರಿ ಕಚೇರಿಗೆ ಮಾಹಿತಿ ನೀಡಬೇಕು ಎಂದು ಸಿದ್ದರಾಮಯ್ಯ ಹೇಳಿದರು.


## ಹರಿಹರದ ಶ್ರೀ ಮಹಾತಪಸ್ವಿ ಸೇವಾ ಪ್ರತಿಷ್ಠಾನದ 7ನೇ ವರ್ಷದ ವಾರ್ಷಿಕೋತ್ಸವ

# ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಹರಿಹರದ ಶ್ರೀ ಮಹಾತಪಸ್ವಿ ಸೇವಾ ಪ್ರತಿಷ್ಠಾನದ 7ನೇ ವರ್ಷದ ವಾರ್ಷಿಕೋತ್ಸವ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪಟ್ಟಣದ ನಿವೃತ್ತ ಶಿಕ್ಷಕ, ಸಾಹಿತಿ ಎಸ್.ಎಫ್. ಆದಿ ಅವರಿಗೆ 'ಪುಲಿಗೆರೆ ಪುರಾಣ ಪ್ರಭೆ' ಹಾಗೂ ಹಿರಿಯ ಪತ್ರಕರ್ತ ದಿಗಂಬರ ಪೂಜಾರ ಅವರಿಗೆ 'ಪತ್ರಿಕಾ ಸಿರಿ' ಸೇರಿದಂತೆ ಅನೇಕ ಸಾಧಕರಿಗೆ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ನಗರದ ಅಧಿಯಮಾನ್ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ವಿತರಿಸಿ ಮಾತನಾಡಿದ ಹಿರಿಯ ನಟಿ ತಾರಾ ಅನುರಾಧಾ, ಸಮಾಮುಖಿಯಾಗಿ ನಿಸ್ವಾರ್ಥ, ಪ್ರಾಮಾಣಿಕ ಸೇವೆ ಮಾಡುವ ವ್ಯಕ್ತಿಗಳು ಸದಾ ಸ್ಮರಣೀಯರು. ತೆರೆಮರೆಯಲ್ಲಿ ಸಮಾಜ ಸೇವೆ ಮಾಡುವ ಮಹನೀಯರನ್ನು ಗುರುತಿಸಿ, ಗೌರವಿಸಿ, ಪ್ರೋತ್ಸಾಹಿಸುವ ಕಾರ್ಯದೊಂದಿಗೆ ಜನರಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಬಿತ್ತುವ ಕಾರ್ಯ ಮಾಡುತ್ತಿರುವ ಹರಿಹರದ ಶ್ರೀ ಮಹಾತಪಸ್ವಿ ಸೇವಾ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ ಎಂದರು.




ಸಮಾರಂಭದ ಅಧ್ಯಕ್ಷತೆಯನ್ನು ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಸಿ.ವಿ. ಪಾಟೀಲ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ, ಜಿ.ಕೇಶವಮೂರ್ತಿ, ಲಕ್ಷ್ಮಣನ್, ಸುಂದರಯ್ಯ, ಡಾ.ರಂಗನಾಥ, ರಾಜು ಪಾಟೀಲ ಸೇರಿ ಹಲವರಿದ್ದರು. ಈ ವೇಳೆ ಸಪ್ತಸ್ವರ ತಾರೆ ರೋಹಿಣಿ ಪ್ರಶಸ್ತಿಯನ್ನು ಅಂತಾರಾಷ್ಟ್ರೀಯ ಕಲಾವಿದೆ ಡಾ. ಕೆ.ಎಂ. ರೋಹಿಣಿ ಅವರಿಗೆ ಹಾಗೂ ಚೆನ್ನೈನ ಸಾಹಿತಿ ಡಾ.ತಮಿಳುಸೆಲ್ವಿ(ಸಾಹಿತ್ಯ ಸಿರಿ), ಸಮಾಜ ಸೇವಕಿ ತಮಿಳುನಾಡಿನ ರಾಧಾ (ಸಮಾಜ ಸೇವಾ ಸಿರಿ), ನಾಟಿ ವೈದ್ಯ ಎಂ.ಚಂದ್ರನ್ ಗುರೂಜಿ (ವೈದ್ಯ ಸಿರಿ), ಮಧುಸೂಧನ್ ಪಟೇಲ್ (ಉದ್ಯೋಗ ಸಿರಿ), ನಿವೃತ್ತ ಶಿಕ್ಷಕ ಎಚ್.ಕೆ. ಕೊಟ್ರೇಶಪ್ಪ (ಶಿಕ್ಷಕ ಸಿರಿ) ನೀಡಿ ಗೌರವಿಸಲಾಯಿತು. ಪ್ರತಿಷ್ಠಾನದ ರಾಜ್ಯಾಧ್ಯಕ್ಷೆ ಕೆ.ಸಿ. ಶಾಂತಕುಮಾರಿ ಪ್ರಾಸ್ತಾವಿಕ ನುಡಿದರು. ರಾಮಯ್ಯ ಗಣಾಚಾರಿ, ಭಾನುಪ್ರಕಾಶ, ವಿಜಯಲಕ್ಷ್ಮೀ ನಿರೂಪಿಸಿದರು.

ಪ್ರತಿಷ್ಠಾನದ ಸಂಸ್ಥಾಪಕರಾದ ಶ್ರೀ ಅವಧೂತ ಕವಿ ಗುರುರಾಜ ಗುರೂಜಿಯವರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಪ್ರಸ್ತುತ ತಾಂತ್ರಿಕ ಕಾಲಘಟ್ಟದಲ್ಲಿ ನಮ್ಮ ಸಂಸ್ಕೃತಿ, ಸಂಪ್ರದಾಯ, ಆಚರಣೆ, ದೇವರು, ಧರ್ಮ, ಮೌಲ್ಯಗಳಿಂದ ದೂರ ಸರಿಯುತ್ತಿರುವ ಜನರನ್ನು ಮತ್ತೆ ಜಾಗೃತಗೊಳಿಸುವುದರೊಂದಿಗೆ ಸಮಾಜಮುಖಿ ಕಾರ್ಯಗಳನ್ನು ಪ್ರತಿಷ್ಠಾನ ಮಾಡುತ್ತಿದೆ ಎಂದರು.

# ಕ್ರೀಡೆಯಲ್ಲಿ ಸ್ಪರ್ಧಾತ್ಮಕ ಮನೋಭಾವ ಮುಖ್ಯ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪ್ರತಿಯೊಬ್ಬ ಕ್ರೀಡಾಪಟುವಿನಲ್ಲೂ ಕ್ರೀಡಾ ಮನೋಭಾವ ಮುಖ್ಯವಾಗಿದ್ದು, ಸೋಲು-ಗೆಲುವು ನಿಮ್ಮ ಸತತ ಪ್ರಯತ್ನದ ಫಲವಾಗಿರುತ್ತದೆ. ನೀವು ಸ್ಪರ್ಧಿಸುವ ಪ್ರತಿ ಪಂದ್ಯದಲ್ಲೂ ಪ್ರತಿಭೆ ಹೊರಹೊಮ್ಮಿದಲ್ಲಿ ಗೆಲುವು ನಿಮಗೆ ಕಟ್ಟಿಟ್ಟ ಬುತ್ತಿ ಎಂದು ಅನ್ನದಾನೇಶ್ವರ ಪ.ಪೂ ಮಹಾವಿದ್ಯಾಲಯದ ಪ್ರಾಚಾರ್ಯ ವೈ.ಸಿ. ಪಾಟೀಲ ತಿಳಿಸಿದರು.



ಕರ್ನಾಟಕ ಅಟ್ಯಾಪಟ್ಯಾ ಅಸೋಸಿಯೇಷನ್ ಹಾಗೂ ಸ್ಥಳೀಯ ಚೈತನ್ಯ ಕ್ರೀಡಾ ಸಂಸ್ಥೆಯ ಸಹಭಾಗಿತ್ವದಲ್ಲಿ 32ನೇ ರಾಷ್ಟ್ರೀಯ ಸೀನಿಯರ್ ಅಟ್ಯಾಪಟ್ಯಾ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲಿರುವ ಮಹಿಳಾ ಕ್ರೀಡಾಪಟುಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ನಿವೃತ್ತ ಶಿಕ್ಷಕ ಎಂ.ಎಸ್. ಧಡೇಸೂರಮಠ, ಚೈತನ್ಯ ಕ್ರೀಡಾ ಸಂಸ್ಥೆಯ ಮುಖ್ಯಸ್ಥ ಎನ್.ಕೆ. ಬೇವಿನಕಟ್ಟಿ ಮಾತನಾಡಿ ಕ್ರೀಡಾಪಟುಗಳಿಗೆ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಎನ್.ಆರ್. ಗೌಡರ, ಪ್ರಾಚಾರ್ಯ ವೈ.ಸಿ. ಪಾಟೀಲ, ಎಂ.ಎಸ್. ಧಡೇಸೂರಮಠ ಕ್ರೀಡಾ ಪಟುಗಳಿಗೆ ಸಮವಸ್ತ್ರವನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ತರಬೇತುದಾರ ವಿ.ಎ. ಕುಂಬಾರ, ಹಿರಿಯ ದೈಹಿಕ ಶಿಕ್ಷಕ ಆರ್.ಎಸ್. ನರೇಗಲ್ಲ, ತರಬೇತುದಾರ ಮಹಮ್ಮದರಫೀಕ ರೇವಡಿಗಾರ, ರವಿ, ಸಂಸ್ಥೆಯ ಕಾರ್ಯದರ್ಶಿ ಸಂತೋಷ ಯಳಮಲಿ ಮುಂತಾದವರಿದ್ದರು.

# ಸಂವಿಧಾನ ಇರುವವರೆಗೂ ಅಂಬೇಡ್ಕರ್ ಅಜರಾಮರ

■ವಿಜಯಸಾಕ್ಷಿ ಸುದ್ದಿ, ಗದಗ

ದೇಶದಲ್ಲಿ ಸಂವಿಧಾನ ಇರುವವರೆಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅಜರಾಮರರಾಗಿರುತ್ತಾರೆ. ಅವರು ಭಾರತಕ್ಕೆ ನೀಡಿರುವ ಲಿಖಿತ ಸಂವಿಧಾನ ಎಂದಿಗೂ ಆದರ್ಶವಾಗಿದೆ. ಇದರಲ್ಲಿನ ಅಂಶಗಳ ಪಾಲನೆಯಿಂದ ನಮ್ಮ ದೇಶ ಸುಭಿಕ್ಷವಾಗಿರಲು ಸಾಧ್ಯವಾಗುತ್ತದೆ ಎಂದು ಎಂ.ಬಿ. ಕಳಕಣ್ಣವರ ಸರಕಾರಿ ಪದವಿ ಕಾಲೇಜಿನ ಪ್ರಾಚಾರ್ಯ ಈ.ಆರ್. ಲಗಳೂರ ಹೇಳಿದರು.



ಇಲ್ಲಿನ ಕಾಲೇಜಿನಲ್ಲಿ ಆಚರಿಸಲಾದ ಸಂವಿಧಾನ ದಿನಾಚರಣೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ಸಂವಿಧಾನವನ್ನು ಬರೀ ಓದಿದರೆ ಸಾಲದು. ಅದರಲ್ಲಿನ ಅಂಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದರಿಂದ ದೇಶದಲ್ಲಿನ ಸಮಸ್ಯೆಗಳಿಗೆ ಪರಿಹಾರ ದೊರಕಲು ಸಾಧ್ಯವಾಗುತ್ತದೆ. ಸಂವಿಧಾನವನ್ನು ನಾವಷ್ಟೇ ಓದಿಕೊಳ್ಳದೆ ಇತರರಿಗೂ ಅದನ್ನು ಓದಿ ಹೇಳಬೇಕೆಂದು ಲಗಳೂರ ತಿಳಿಸಿದರು.

ರಾಜ್ಯಶಾಸ್ತ್ರ ಉಪನ್ಯಾಸಕಿ ಸುನಂದಾ ಮುಂಜಿ ಸಂವಿಧಾನ ಕುರಿತು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರರು ಸಂವಿಧಾನದಲ್ಲಿ ದೇಶದ ಪ್ರಜೆಗಳಿಗೆ ಹಕ್ಕು ಮತ್ತು ಕರ್ತವ್ಯಗಳನ್ನು ನೀಡಿದ್ದಾರೆ. ಹಕ್ಕುಗಳಿಗಾಗಿ ನಾವು ಹೇಗೆ ಹೋರಾಡುತ್ತೇವೆಯೋ, ನಮ್ಮ ಕರ್ತವ್ಯಗಳಿಗಾಗಿಯೂ ನಾವು ಹಾಗೇ ತುಡಿಯಬೇಕು. ಅಂದಾಗ ಮಾತ್ರ ದೇಶ ಅಭಿವೃದ್ಧಿ ಪಥದಲ್ಲಿ ಸಾಗಲು ಸಾಧ್ಯ ಎಂದರು.

ಪ್ರಾಚಾರ್ಯ ಈ.ಆರ್. ಲಗಳೂರ ನಂತರ ಸಂವಿಧಾನದ ಪೀಠಿಕೆಯನ್ನು ಓದಿ ಹೇಳಿ, ಸಿಬ್ಬಂದಿಯವರಿಂದ ಓದಿಸಿದರು. ಕಾರ್ಯಕ್ರಮದಲ್ಲಿ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಂವಿಧಾನವನ್ನು ಸಮರ್ಥವಾಗಿ ಬಳಸುವ ವ್ಯಕ್ತಿಗಳು ನೀವಾಗಬೇಕು


▶▶ಮೊದಲನೇ ಪುಟದಿಂದ

ವಿದ್ಯಾರ್ಥಿ ದೆಸೆಯಿಂದಲೇ ಮಕ್ಕಳಲ್ಲಿ ಸಂವಿಧಾನದ ಅರಿವು ಮೂಡಿಸಲು ಸರ್ಕಾರ ಮುಂದಾಗಿದೆ. ಸಂವಿಧಾನ ತತ್ವದಡಿ ನಾವು ಬದುಕು ಸಾಗಿಸಬೇಕು. ಮುಖ್ಯ ಮಂತ್ರಿ ಸಿದ್ಧರಾಮಯ್ಯ ನೇತೃತ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ ಬದಲಾವಣೆ ತರುವ ಮೂಲಕ ಎಲ್ಲರೂ ಸರ್ಕಾರಿ ಶಾಲೆಯೆಡೆಗೆ ಮರಳುವಂತೆ ಮಾಡಲಾಗುವದ ಎಂದರು.

ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ ಮಾತನಾಡಿ, 2018ರಲ್ಲಿ ಸಂವಿಧಾನದ ಓದು ಪುಸ್ತಕವನ್ನು ಬರೆದು ಸಂವಿಧಾನ ಓದಿಸುವ ಅಭಿಯಾನ ನಡೆಸಿದೆ. ಅಭಿಯಾನಕ್ಕೆ ಉತ್ತಮ ಜನಸ್ಪಂದನೆ ದೊರೆಯಿತು ಎಂದರು.

ಸಂವಿಧಾನ ಓದು ಪುಸ್ತಕವನ್ನು 5ನೇ ಹಣಕಾಸು ಯೋಜನೆ ಅಧ್ಯಕ್ಷರಾದ ಸಿ.ನಾರಾಯಣಸ್ವಾಮಿ ಬಿಡುಗಡೆಗೊಳಿಸಿದರು. ವಿಧಾನ ಪರಿಷತ್ ಸಭಾಧ್ಯಕ್ಷ ಬಸವರಾಜ ಹೊರಟ್ಟಿ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಪ್ರಮೋದ ಹೆಗ್ಡೆ, ಕೆ.ಎಚ್. ಪಾಟೀಲ ಪ್ರತಿಷ್ಠಾನದ ಅಧ್ಯಕ್ಷ ಡಿ.ಆರ್. ಪಾಟೀಲ, ಮಾಜಿ ಸಂಸದ ಆಯ್.ಜಿ. ಸನದಿ, ಜಿ.ಪಂ ಮಾಜಿ ಅಧ್ಯಕ್ಷರಾದ ವಾಸಣ್ಣ ಕುರಡಗಿ, ಸಿದ್ದು ಪಾಟೀಲ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅತಿಥಿಗಳನ್ನು ಸ್ವಾಗತಿಸಿದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ ವಂದಿಸಿದರು. ಜೆ.ಕೆ. ಜಮಾದಾರ ಕಾರ್ಯಕ್ರಮ ನಿರ್ವಹಿಸಿದರು.

# ಧೀರೇಂದ್ರ ಹುಯಿಲಗೋಳರಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ವಿದ್ಯಾದಾನ ಶಿಕ್ಷಣ ಸಂಸ್ಥೆ 2023ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರವಾಗಿರುವ ಹಿನ್ನೆಲೆಯಲ್ಲಿ ಸಂಸ್ಥೆಯ ಅಧ್ಯಕ್ಷ ಧೀರೇಂದ್ರ ಹುಯಿಲಗೋಳರನ್ನು ದಿ ಗದಗ-ಬೆಟಗೇರಿ ಸೆಂಟ್ರಲ್ ಕೋ-ಆಪ್ ಹೋಲ್‌ಸೇಲ್ ಸ್ಟೋರ್ಸ್ ಲಿ. (ಜನತಾ ಬಜಾರ್) ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಸಂಸ್ಥೆಯ ಮಾಜಿ ಅಧ್ಯಕ್ಷ ಗಿರಿಧರಸಿಂಗ್ ಎಸ್.ಬ್ಯಾಳಿಯವರು ಮಾತನಾಡಿ, ವಿದ್ಯಾದಾನ ಶಿಕ್ಷಣ ಸಂಸ್ಥೆಯು 100 ವರ್ಷಗಳಿಂದ ಗದಗ ಪರಿಸರದಲ್ಲಿ ಶಿಕ್ಷಣದ ದಾಸೋಹವನ್ನು ನೆರವೇರಿಸುತ್ತಿದೆ. ಈ ಸಂಸ್ಥೆಗೆ ರಾಜ್ಯೋತ್ಸವ ಪ್ರಶಸ್ತಿ ದೊರಕಿರುವುದು ಸಂತಸದ ವಿಚಾರ. ಈ ಸಂಸ್ಥೆಯನ್ನು ಮುನ್ನಡೆಸುತ್ತಿರುವ ಧೀರೇಂದ್ರ ಹುಯಿಲಗೋಳರ ಕಾರ್ಯ ಶ್ಲಾಘನೀಯ ಎಂದರು.

ಸಂಸ್ಥೆಯ ಹನಮಂತಪ್ಪ ಗರಗ, ಮ್ಯಾನೇಜರ್ ಜೂನಸಾಬ ಮಂಗಳೂರ, ಅನ್ವರ ಶಿರಹಟ್ಟಿ, ಇಮಾಮಹುಸೇನ ಥಾಲಾಯತ ಸೇರಿದಂತೆ ಇನ್ನಿತರರು ಇದ್ದರು.




ಗದಗ: ಕಾಂಗ್ರೆಸ್‌ನ ಹಿರಿಯರು ಹಾಗೂ ಪ್ರಾಧಿಕಾರದ ಮಾಜಿ ಅಧ್ಯಕ್ಷ, 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತ ಗುರಣ್ಣ ಬಳಗಾನೂರರನ್ನು ಸಾಮಾಜಿಕ ಹೋರಾಟಗಾರ ಸೈಯದ್ ಖಾಲಿದ್ ಕೊಪ್ಪಳ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸೈಯದ್ ಖಾಲಿದ್ ಕೊಪ್ಪಳ, ಗುರಣ್ಣ ಬಳಗಾನೂರವರು ಜಿಲ್ಲೆಯ ಪ್ರಾಮಾಣಿಕ ನಾಯಕರಲ್ಲಿ ಒಬ್ಬರು. ಅವರಿಗೆ ಪ್ರಶಸ್ತಿ ಸಂದಿರುವುದು ನಮ್ಮೆಲ್ಲರಿಗೂ ಹೆಮ್ಮೆ ತಂದಿದೆ ಎಂದರು.

# ಅತಿಥಿಗಳ ಧರಣಿಗೆ ಸಿವಿಸಿ ಬೆಂಬಲ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಸೇವಾ ಕಾಯಂಗೆ ಆಗ್ರಹಿಸಿ ಹಲವು ದಿನಗಳಿಂದ ನಡೆಸುತ್ತಿರುವ ಅತಿಥಿ ಉಪನ್ಯಾಸಕರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹಕ್ಕೆ ಜೆಡಿಎಸ್‌ನ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ ಬೆಂಬಲ ವ್ಯಕ್ತಪಡಿಸಿದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಧರಣಿನಿರತ ಅತಿಥಿ ಉಪನ್ಯಾಸಕರನ್ನು ಸೋಮವಾರ ಭೇಟಿ ಮಾಡಿದ ಅವರು, ಪ್ರತಿಭಟನಾಕಾರರ ಜೊತೆಗೆ ಕೆಲ ಕಾಲ ಧರಣಿ ನಡೆಸಿದರು.



ಬಳಿಕ ಮಾತನಾಡಿದ ಅವರು, ಅತಿಥಿ ಉಪನ್ಯಾಸಕರ ಬೇಡಿಕೆ ನ್ಯಾಯಯುತವಾಗಿದೆ. ಈ ಹಿಂದೆ ಕುಮಾರಸ್ವಾಮಿ ಸಿಎಂ ಆಗಿದ್ದ ವೇಳೆ ಗೌರವಧನವನ್ನು ಐದು ಸಾವಿರ ರೂಪಾಯಿಗೆ ಹೆಚ್ಚಿಸುವ ಕೆಲಸ ಮಾಡಿದ್ದರು. ರಾಜಕೀಯದ ಕೆಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅದು ಜಾರಿಯಾಗಲಿಲ್ಲ. ಹಲವು ಗ್ಯಾರಂಟಿ ಜಾರಿಗೊಳಿಸಿರುವ ಈ ಸರಕಾರಕ್ಕೆ ಅತಿಥಿ ಉಪನ್ಯಾಸಕರ ಸೇವಾ ಕಾಯಮಾತಿ ಹೊರೆಯೇನಲ್ಲ ಎಂದು ಅಭಿಪ್ರಾಯಪಟ್ಟರು.

ಬಿಜೆಪಿ ಸರಕಾರದ ಅವಧಿಯಲ್ಲಿ ಅತಿಥಿ ಉಪನ್ಯಾಸಕರ ಗೌರವಧನವನ್ನು ದುಪ್ಪಟ್ಟು ಹೆಚ್ಚಿಸಲಾಗಿತ್ತು. ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕ-ಉಪನ್ಯಾಸಕರ ಪಾತ್ರ ಮಹತ್ವದ್ದು. ಅಧಿವೇಶನದಲ್ಲಿ ಈ ಸಮಸ್ಯೆ ಕುರಿತು ಚರ್ಚಿಸಲು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಜೆಡಿಎಸ್‌ನ ವರಿಷ್ಠ ಎಚ್.ಡಿ.ಕುಮಾರಸ್ವಾಮಿಯವರಿಗೆ ಪತ್ರ ಬರೆಯುವ ಭರವಸೆ ನೀಡಿದರು.

ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಾ.ಮಹೇಶ ಗೋವನಕೊಪ್ಪ ಮಾತನಾಡಿ, ಸಮಾಜದ ಉನ್ನತ ವ್ಯಕ್ತಿಗಳ ಕೊಡುಗೆ ನೀಡುವ ಶಿಕ್ಷಕಸಮೂಹ ಬೀದಿಗಿಳಿದಿರುವುದು ವಿಪರ್ಯಾಸ. ವೈದ್ಯಾಧಿಕಾರಿಗಳ ಸಂಘಟನೆಯ ಬೆಂಬಲ ಅತಿಥಿ ಉಪನ್ಯಾಸಕರ ಸಂಘಕ್ಕಿದೆ ಎಂದು ಘೋಷಿಸಿದರು.

ಈ ಸಂದರ್ಭದಲ್ಲಿ ಎಂ.ಶಿವಣ್ಣ, ಉಮಾ, ಉಷಾ, ಶಿವಬಸಪ್ಪ, ಸಂತೋಷ್ ಔದಿ, ಮಹೇಶ್, ಸೋಮೇಶ್.ಎಂ., ಈಶಪ್ಪ ಮೇಟಿ, ಪ್ರಕಾಶ್ ಜಡಿಯವರ್, ವಿಜಯಕುಮಾರ ತೋಟದ, ಗೀತಾ ಬನ್ನಿಕೊಪ್ಪ, ಡಾ.ವಿಪ್ಲವಿ, ಶಮಶಾದ್ ಬೇಗಂ, ವೀಣಾ ಪೂಜಾರ್ತಿ, ಡಾ.ಬಸಮ್ಮ, ಡಾ.ಗೀತಾ ಮುತ್ತಾಳ, ಡಾ.ಆರತಿ ಸಜ್ಜನರ್, ಸಂತೋಷಿ ಬೆಲ್ಲದ್, ಅಕ್ಕಮಹಾದೇವಿ, ವಿದ್ಯಾ ಮುಳಗುಂದ, ಶ್ರೀಕಾಂತ ಸಜ್ಜನ್, ರವಿ ಹಿರೇಮಠ, ಸಂಗಮೇಶ್, ಮಲ್ಲಿಕಾರ್ಜುನ, ಮಂಜುನಾಥ್, ಬಸವರಾಜ ಕರುಗಲ್, ಮಹಮ್ಮದ ಶಫಿ, ಪ್ರಕಾಶ್, ವಿಜಯ, ಡಾ.ವೀರಣ್ಣ, ಜ್ಞಾನೇಶ್ವರ, ಗೋಣಿಬಸಪ್ಪ, ಶಿವಮೂರ್ತೆಪ್ಪ, ಬಿಷ್ಠಪ್ಪ, ವಿನಯ್, ಮೌನೇಶ್ ಮತ್ತಿತರರು ಇದ್ದರು.

**ಸಂಸಾರ ಸಮೇತ ಮನವಿ ಸಲ್ಲಿಸಲು ನಿರ್ಧಾರ:**

ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಲು ಆಗ್ರಹಿಸಿ ಡಿಸೆಂಬರ್ 1ರ ಶುಕ್ರವಾರ ಸಂಸಾರ ಸಮೇತ ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಮೂಲಕ ಸಿಎಂಗೆ ಮನವಿ ಸಲ್ಲಿಸಲು ಅತಿಥಿ ಉಪನ್ಯಾಸಕರ ಸಂಘಟನೆ ಸೋಮವಾರ ನಿರ್ಧರಿಸಿತು.

# ಬರ ಪರಿಹಾರ ವಿತರಣೆಗೆ ಶೀಘ್ರವೇ ಕ್ರಮ

▶▶ಮೊದಲನೇ ಪುಟದಿಂದ

**ವೇಸ್ಟ್ ಟು ಎನರ್ಜಿ ಪ್ರೊಜೆಕ್ಟ್:** ಗದಗ ನಗರದಲ್ಲಿ ವೇಸ್ಟ್ ಟು ಎನರ್ಜಿ ಯೋಜನೆ ಅನುಷ್ಠಾನಕ್ಕೆ ಚಿಂತಿಸಲಾಗುತ್ತಿದ್ದು, ಆದಷ್ಟು ಬೇಗ ಈ ಯೋಜನೆಯನ್ನು ಪ್ರಾರಂಭಿಸಲಾಗುವದು. ಈ ಕುರಿತು ಈಗಾಗಲೇ ಸರ್ಕಾರದ ಹಂತದಲ್ಲಿ ಅಂತಿಮ ಸಿದ್ಧತೆ ನಡೆಸಲಾಗುತ್ತಿದೆ. ವೇಸ್ಟ್ ಟು ಎನರ್ಜಿ ಅನುಷ್ಠಾನದಿಂದ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ತ್ಯಾಜ್ಯ ನಿರ್ವಹಣೆ ಮಾಡಲಾಗುವದು. ಇದರಿಂದ ಪರಿಸರಕ್ಕೆ ಯಾವುದೇ ಅಪಾಯ ಇರುವುದಿಲ್ಲ ಎಂದರು.

ಯುನೆಸ್ಕೋ ಪಟ್ಟಿಗೆ ಲಕ್ಕುಂಡಿ ಪ್ರಸ್ತಾವನೆ: ಲಕ್ಕುಂಡಿಯನ್ನು ಯುನೆಸ್ಕೋ ಪಾರಂಪರಿಕ ತಾಣವನ್ನಾಗಿಸಲು ಅಗತ್ಯದ ಪ್ರಸ್ತಾವನೆಯನ್ನು ಸಲ್ಲಿಸಲು ಪ್ರಾಚ್ಯ ವಸ್ತು ಆಯುಕ್ತರಿಗೆ ಸೂಚನೆ ನೀಡಲಾಗಿರುತ್ತದೆ. ಪ್ರವಾಸೋದ್ಯಮ ಇಲಾಖೆಯಿಂದ ಈಗಾಗಲೇ ಸ್ಮಾರಕಗಳ ದತ್ತು ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಬಹಳಷ್ಟು ಜನ ಸ್ಮಾರಕಗಳ ದತ್ತು ಸ್ವೀಕಾರಕ್ಕೆ ಆಸಕ್ತಿ ತೋರಿದ್ದಾರೆ ಎಂದರು. ಸ್ಮಾರಕಗಳ ದತ್ತು ಯೋಜನೆಯು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮೊದಲನೇ ಹಂತದಲ್ಲಿ ಸ್ಮಾರಕಗಳ ಸ್ವಚ್ಛತೆ, ಭದ್ರತೆ, ಶುಚಿತ್ವಕ್ಕೆ ಒತ್ತು ಕೊಲಾಗುವದು. ಎರಡನೇ ಹಂತದಲ್ಲಿ ಭಗ್ನಗೊಂಡ ಸ್ಮಾರಕಗಳನ್ನು ಪುನರ್ ಸ್ಥಾಪನೆ, ನಿರ್ಮಾಣಕ್ಕೆ ಕ್ರಮ ವಹಿಸಲಾಗುತ್ತಿದೆ ಎಂದರು.

**ಬರ ನಿರ್ವಹಣೆ:** ಜಿಲ್ಲೆಯಲ್ಲಿನ ಬರಗಾಲ ಪರಿಸ್ಥಿತಿ ನಿರ್ವಹಣೆ ಕುರಿತಂತೆ ಈಗಾಗಲೇ ಸಂಬಂಧಿತ ಇಲಾಖಾ ಅಧಿಕಾರಿಗಳ ಜೊತೆಗೆ ಚರ್ಚಿಸಿ, ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ.

ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಅಗತ್ಯದ ಎಲ್ಲ ಕ್ರಮಗಳನ್ನು ವಹಿಸಲು ಜಿಲ್ಲಾಡಳಿತಕ್ಕೆ ತಿಳಿಸಿದೆ. ಜಾನುವಾರುಗಳಿಗೆ ಮೇವು ಕೊರತೆ ನೀಗಿಸಲು ಪ್ರತಿ ಗ್ರಾ.ಪಂ.ಗಳಲ್ಲಿ ಮೇವು ಬ್ಯಾಂಕ್ ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಬರ ಪರಿಹಾರ ವಿತರಣೆಗೆ ಶೀಘ್ರವೇ ಕ್ರಮ ಕೈಗೊಳ್ಳಲಾಗುವದು ಎಂದು ಸಚಿವ ಎಚ್.ಕೆ. ಪಾಟೀಲ ಅವರು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.


ಕರ್ನಾಟಕ ಸರಕಾರ (ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ)
**ಉಪ ನಿರ್ದೇಶಕರು (ಗ್ರಾ.ಕೈ)ರವರ ಕಚೇರಿ,**
**ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್,**
**ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ: 109, ಹುಬ್ಬಳ್ಳಿ ರೋಡ,**
**ಗದಗ-582103. ದೂರವಾಣಿ : 08372-220506.**
**Mail : ddkvi-gadag@karnatakaindustry.gov.in**
ಸಂ.ಜಿಪಂಗ/ಗ್ರಾಕೈ/ಜಿವಯೋ/ಉಖ/ಟೆ/2023-24 ದಿನಾಂಕ : 23-11-2023

**ಟೆಂಡರ್ ಪ್ರಕಟಣೆ**

**ಜಿಲ್ಲಾ ವಲಯ ಯೋಜನೆಯಡಿ** ವೃತ್ತಿನಿರತ ಕುಶಲಕರ್ಮಿಗಳಿಗೆ ಈ ಕೆಳಕಂಡ ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡಲು ಅಧಿಕೃತ ಪೂರೈಕೆದಾರರಿಂದ ಇ-ಪ್ರೊಕ್ಯೂರ್‌ಮೆಂಟ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
**ಟೆಂಡರ್ ನಂ: IC/2023-24/IND0034**

| ಕ್ರ. ಸಂ. | ಸಾಮಗ್ರಿ ವಿವರಗಳು | ಸಂಖ್ಯೆ | ಉಪಕರಣ ಖರೀದಿಗಾಗಿ ನಿಗದಿಪಡಿಸಿದ ಮೊತ್ತ (ರೂ. ಲಕ್ಷಗಳಲ್ಲಿ) | ನಿಗದಿ ಪಡಿಸಿದ ಇಎಂಡಿ (ರೂ.ಗಳಲ್ಲಿ) |
|---|---|---|---|---|
| 1 | ಹೊಲಿಗೆಯಂತ್ರ | 365 | 29.03 | 72575.00 |
| 2 | ಬಡಿಗತನ ಉಪಕರಣಗಳು | 97 | 7.76 | 19400.00 |
| 3 | ಕ್ಷೌರಿಕ | 89 | 7.16 | 17900.00 |
| 4 | ಧೋಬಿ | 26 | 2.08 | 5200.00 |
| | ಒಟ್ಟು | **577** | **46.03** | **115075.00** |

ಮಾದರಿ ಸಾಮಗ್ರಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **26-12-2023** ಸಾಯಂಕಾಲ 5.00 ಗಂಟೆ, ಈ-ಪ್ರೊಕ್ಯೂರ್‌ಮೆಂಟರ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **22-12-2023** ಮಧ್ಯಾಹ್ನ 3.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **27-12-2023** ಬೆಳಿಗೆ 11.00 ಗಂಟೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **29-12-2023** ಬೆಳಿಗೆ 11.00 ಗಂಟೆ.

ಟೆಂಡರ್ ವಿವರಗಳನ್ನು **https://kppp.karnataka.gov.in** ನಿಂದ ಪಡೆದು ಆಸಕ್ತ ಪೂರೈಕೆದಾರರು ಟೆಂಡರ್‌ಗೆ ನಿಗದಿಪಡಿಸಿದ ಷರತ್ತುಗಳನ್ವಯ ಅಗತ್ಯ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ನಿಯಮಾನುಸಾರ ಅರ್ಜಿ ಶುಲ್ಕ ಹಾಗೂ ನಿಗದಿಪಡಿಸಿದ ಇಎಂಡಿ ಪಾವತಿಸಿ ಇ-ಸಂಗ್ರಹಣೆಯಲ್ಲಿ ಮಾತ್ರ ಟೆಂಡರ್ ಸಲ್ಲಿಸಬೇಕು. ಟೆಂಡರಿನಲ್ಲಿ ಭಾಗವಹಿಸುವವರು ಮಾದರಿ ಸಾಮಗ್ರಿಗಳನ್ನು ನಿಗದಿಪಡಿಸಿದ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಮಾದರಿ ಸಾಮಗ್ರಿಗಳ ಗುಣಮಟ್ಟ ನಿಗದಿಪಡಿಸಿದ ಸ್ಪೆಸಿಫಿಕೇಷನ್ ಪ್ರಕಾರ ಸರಿಯಾಗಿ ಇದ್ದಲ್ಲಿ & ನಿಗದಿಪಡಿಸಿದ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ & ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದುವ ಟೆಂಡರ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯ ಮುಖ್ಯಸ್ಥರನ್ನು ಸಂಪರ್ಕಿಸಬಹುದಾಗಿದೆ. (ದೂರವಾಣಿ ಸಂಖ್ಯೆ : **08372-220506**). **ಸಹಿ/- ಉಪ ನಿರ್ದೇಶಕರು(ಗ್ರಾಕೈ)**
**ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್, ಗದಗ**
ವಾಸಾಸಂಇ/ಗದಗ/ಕೆಎಸ್‌ಎಂಸಿಎ/317/2023-24

## ಜಿಲ್ಲಾ ಮಟ್ಟದ 'ಮಕ್ಕಳ ಸಾಹಿತ್ಯ ಸಂಭ್ರಮ' ಇಂದು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕನ್ನಡ ಸಾಹಿತ್ಯ ಪರಿಷತ್ತು, ಮಕ್ಕಳ ಸಾಹಿತ್ಯ ಪರಿಷತ್ತಿನ ಶಿಗ್ಲಿ ಹೋಬಳಿ ಘಟಕದಿಂದ ನ.28ರಂದು ಬೆಳಿಗ್ಗೆ 9ಕ್ಕೆ ಶಿಗ್ಲಿಯ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಸಾಹಿತ್ಯ ಸಂಭ್ರಮ ಜರುಗಲಿದೆ.

ವಿದ್ಯಾರ್ಥಿನಿ ಸವಿತಾ ಹವಳದ ಕಾರ್ಯಕ್ರಮ ಉದ್ಘಾಟಿಸುವರು. ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅಧ್ಯಕ್ಷತೆ ವಹಿಸುವರು. ಕಸಾಪ ಗ್ರಾಮ ಘಟಕದ ಗೌರವಾಧ್ಯಕ್ಷ ಪ್ರವೀಣ ಹುಲಗೂರ ಆಶಯ ನುಡಿಗಳನ್ನಾಡುವರು.

ಡಿಡಿಪಿಐ ಎಂ.ಎ. ರಡ್ಡೇರ, ಬಿಇಒ ಜಿ.ಎಂ. ಮುಂದಿನಮನಿ, ಮಸಾಪ ಜಿಲ್ಲಾಧ್ಯಕ್ಷ ಡಾ.ರಾಜೇಂದ್ರ ಗಡಾದ, ಮಸಾಪ ತಾಲೂಕಾಧ್ಯಕ್ಷ ನಾಗರಾಜ ಹಣಗಿ, ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ, ಕಸಾಪ ಹೋಬಳಿ ಘಟಕದ ಅಧ್ಯಕ್ಷ ರಾಜು ರಜಪೂತ, ಸಾಹಿತಿಗಳಾದ ಡಾ.ನಿಂಗು ಸೊಲಗಿ, ಸಿ.ಜಿ. ಹಿರೇಮಠ, ಪೂರ್ಣಾಜಿ ಖರಾಟೆ, ಗ್ರಾ.ಪಂ ಅಧ್ಯಕ್ಷೆ ದುಂಡವ್ವ ಹಾದಿಮನಿ ಸೇರಿದಂತೆ ಗ್ರಾ.ಪಂ ಸದಸ್ಯರು, ಗಣ್ಯರು ಆಗಮಿಸುವರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಶಂಭು ಬಳಿಗಾರ, 2023ರ ಗೃಹ ಮಂತ್ರಿಗಳ ಶ್ರೇಷ್ಠ ತನಿಖಾಧಿಕಾರಿ ಪದಕ ಪುರಸ್ಕೃತ ಲೋಕಾಯುಕ್ತ ಡಿವೈಎಸ್‌ಪಿ ಶಂಕರ ರಾಗಿ ಅವರನ್ನು ಸನ್ಮಾನಿಸಲಾಗುವುದು.

ಮಕ್ಕಳಿಗಾಗಿ ಕವಿಗೋಷ್ಠಿ, ಕಥೆ, ಕವನ ರಚನೆ, ಪ್ರಬಂಧ, ಚಿತ್ರ ರಚನೆ, ಮಕ್ಕಳ ಹಿರಿಯ ಸಾಹಿತಿಗಳ ಸಂವಾದ, ಪವಾಡ ಬಯಲು, ಮಜಾಗಟ ಪ್ರದರ್ಶನದಂತಹ ಅನೇಕ ಚಟುವಟಿಕೆಗಳನ್ನು ಏರ್ಪಡಿಸಲಾಗಿದೆ.

ಸಂಜೆ ನಡೆಯುವ ಸಮಾರೋಪ ಸಮಾರಂಭದ ಸಾನ್ನಿಧ್ಯವನ್ನು ಹೂವಿನಶಿಗ್ಲಿಯ ಶ್ರೀ ಚನ್ನವೀರ ಸ್ವಾಮೀಜಿ ವಹಿಸುವರು. ಅನುಷಾ ಹಿರೇಮಠ, ಎಸ್.ಪಿ. ಬಳಿಗಾರ ಸೇರಿ ಸಾಹಿತಿಗಳು, ಗಣ್ಯರು ಆಗಮಿಸುವರು ಎಂದು ಪ್ರಕಟಣೆ ತಿಳಿಸಿದೆ.

### ಸಮರ್ಪಕ ಬಸ್ ಸೌಕರ್ಯವಿಲ್ಲದೆ ಸಿಕ್ಕ ಟ್ರ್ಯಾಕ್ಟರ್-ಬೈಕ್ ಏರಿ ಶಾಲೆ ತಲುಪುವ ದುಸ್ಥಿತಿ

# ತರಗತಿ ತಲುಪಲು ಇನ್ನಿಲ್ಲದ ಸರ್ಕಸ್!

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಾ ಕೇಂದ್ರವಾಗಿ ಇತ್ತೀಚಿನ ವರ್ಷಗಳಲ್ಲಿ ಹೋರಾಟಗಳ ಮೂಲಕ ಕೆಲ ಮೂಲ ಸೌಕರ್ಯಗಳನ್ನು ಶಿರಹಟ್ಟಿಯ ಜನತೆ ಪಡೆಯುತ್ತಿದೆ. ತಾಲೂಕಾ ಕೇಂದ್ರದಲ್ಲಿ ಇತ್ತೀಚೆಗಷ್ಟೇ ಸಾರಿಗೆ ಘಟಕ ಪ್ರಾರಂಭವಾಗಿದ್ದು, ಘಟಕದಲ್ಲಿ ಸಮರ್ಪಕ ಬಸ್ ಹಾಗೂ ಹೆಚ್ಚುವರಿ ಶೆಡ್ಯೂಲ್‌ಗಳು ಇಲ್ಲದಿರುವುದರಿಂದ ತಾಲೂಕಿನ ಬಹುತೇಕ ಗ್ರಾಮೀಣ ಪ್ರದೇಶಗಳ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಟ್ರ್ಯಾಕ್ಟರ್/ಬೈಕ್ ಹಾಗೂ ಖಾಸಗಿ ವಾಹನಗಳ ಮೂಲಕ ತೆರಳಬೇಕಾದ ಅನಿವಾರ್ಯತೆ ಬಂದೊದಗಿದೆ.

ಟ್ರ್ಯಾಕ್ಟರ್‌ಗಳಲ್ಲಿ ಪ್ರಯಾಣ ಸುರಕ್ಷಿತವೇ?: ಶಿರಹಟ್ಟಿ ತಾಲೂಕಿನ ತೊಳಲಿ, ಚವಡಾಳ, ಹೆಬ್ಬಾಳ, ಕನಕವಾಡ ಗ್ರಾಮಗಳ ವಿದ್ಯಾರ್ಥಿಗಳಿಗೆ ಬೆಳಿಗ್ಗೆ 8 ಗಂಟೆಗೆ ಸಿಂಗಟಾಲೂರ ವಸ್ತಿ ಬಸ್ ಇದ್ದು, ನಿಯಮಿತವಾಗಿ ಬರದೇ ಇರುವ ಕಾರಣ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳು ತಂಗೋಡವರೆಗೂ 2-3 ಕಿಮೀ ಕಾಲ್ನಡಿಗೆಯಲ್ಲಿಯೇ ನಡೆದು ರಾಣೆಬೆನ್ನೂರ ಕಡೆಯಿಂದ ಬೆಳಿಗ್ಗೆ 9 ಗಂಟೆಗೆ ಬರುವ ಬಸ್‌ನಲ್ಲಿ ತೆರಳುತ್ತಿದ್ದಾರೆ.

ಆದರೆ ಈ ಬಸ್ ಸದಾ ತುಂಬಿ ತುಳುಕುವುದರಿಂದ ಅನುಕೂಲಕರವಾಗಿಲ್ಲ. ಇಲ್ಲಿಯೂ ಬಸ್ ಸಿಗದೇ ಇದ್ದರೆ ನಂತರ ವಡವಿ-ಹೊಸೂರವರೆಗೂ ಮತ್ತೆ 7-8ಕಿಮೀ ಕಾಲ್ನಡಿಗೆಯಲ್ಲಿ ಸಂಚರಿಸಿ ಗೋವನಕೊಪ್ಪ ಗ್ರಾಮದಿಂದ ಬರುವಂತಹ ಬಸ್‌ಗಳನ್ನು ಕಾಯುವುದೇ ವಿದ್ಯಾರ್ಥಿಗಳ ನಿತ್ಯ ಕಾಯಕವಾಗಿದೆ. ಹೇಗೇ ಹೊರಟರೂ ನಿಗದಿತ ಸಮಯಕ್ಕೆ ತರಗತಿ ತಲುಪಲಾಗುತ್ತಿಲ್ಲ. ಈ ಕಾರಣಕ್ಕಾಗಿ ವಿದ್ಯಾರ್ಥಿಗಳು ಈ ಭಾಗದಲ್ಲಿ ಸಂಚರಿಸುವ ಟ್ರ್ಯಾಕ್ಟರ್, ಬೈಕ್ ಮತ್ತು ಖಾಸಗಿ ವಾಹನಗಳ ಮೊರೆ ಹೋಗುತ್ತಾರೆ. ವಿದ್ಯಾರ್ಥಿಗಳು ಟ್ರ್ಯಾಕ್ಟರ್‌ಗಳಲ್ಲಿ ಪ್ರಯಾಣಿಸುವುದು ಎಷ್ಟು ಸುರಕ್ಷಿತ ಎಂದು ಪಾಲಕರು ಸಾರಿಗೆ ಇಲಾಖೆಯ ವಿರುದ್ಧ ಹರಿಹಾಯುತ್ತಿದ್ದಾರೆ.



ಪಾಲಕರಿಗೆ ಮಕ್ಕಳ ಚಿಂತೆ: ಬೆಳಿಗ್ಗೆ ಶಾಲಾ/ಕಾಲೇಜಿಗೆ ತೆರಳಿದ ಮಕ್ಕಳು ಶಾಲೆಗೆ ತೆರಳಿ ಮತ್ತೆ ಮನೆಗೆ ಬರುವವರೆಗೂ ಪಾಲಕರು ಮಕ್ಕಳ ಚಿಂತೆಯಲ್ಲೇ ಕಾಲ ಕಳೆಯುತ್ತಿದ್ದಾರೆ. ಈ ಬಗ್ಗೆ ಹಲವಾರು ಬಾರಿ ಪ್ರತಿಭಟನೆ ನಡೆಸಿ, ಸಂಬಂಧಿಸಿದವರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ.

ವಿದ್ಯಾಭ್ಯಾಸದ ಕಥೆಯೇನು?: ಗ್ರಾಮೀಣ ಪ್ರದೇಶಗಳ ಜನತೆಗೆ ಸಮರ್ಪಕ ಬಸ್ ಸೌಲಭ್ಯ ಸಿಗದೇ ಇರುವುದರಿಂದ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಮಾರಕವಾಗುತ್ತಿದೆ. ವಿದ್ಯಾರ್ಥಿನಿಯರಂತೂ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಬಸ್ ಕಾಯುವುದೇ ನಿತ್ಯದ ಕೆಲಸವಾದರೆ, ಸೂಕ್ತ ಸಮಯಕ್ಕೆ ತರಗತಿ ತಲುಪಿ ಶಿಕ್ಷಣ ಪಡೆಯುವುದು ಹೇಗೆ ಎಂಬ ಚಿಂತೆ ಕಾಡತೊಡಗಿದೆ.

ಇದಕ್ಕೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಎಚ್ಚೆತ್ತು, ಈ ಭಾಗದ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಿ, ಅವರ ಶೈಕ್ಷಣಿಕ ಪ್ರಗತಿಗೆ ವ್ಯವಸ್ಥೆ ಕಲ್ಪಿಸಬೇಕಾದ ಜರೂರಿದೆ.

ಈ ಕುರಿತು ಪ್ರತಿಕ್ರಿಯಿಸಿದ ಗ್ರಾಮಸ್ಥರು, ಬಸ್‌ಗಳ ಅನಾನುಕೂಲದಿಂದ ನಮ್ಮ ಮಕ್ಕಳು ಟ್ರ್ಯಾಕ್ಟರ್ ಹಾಗೂ ಬೈಕ್ ಸವಾರರನ್ನು ಅವಲಂಬಿಸಿದ್ದಾರೆ. ಇದೂ ಇಲ್ಲದಿದ್ದರೆ, ನಿತ್ಯವೂ 7-8 ಕಿಮೀ ಕಾಲ್ನಡಿಗೆಯಲ್ಲೇ ಸಾಗಿ, ಅಲ್ಲಿ ಸಿಗುವ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾರೆ. ಹಲವು ಬಾರಿ ಪ್ರತಿಭಟನೆ, ಮನವಿ ಮಾಡಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಈ ಅವ್ಯವಸ್ಥೆ ನಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮಾರಕವಾಗುತ್ತಿದೆ. ಈ ಕೂಡಲೇ ನಮ್ಮ ಭಾಗದಲ್ಲಿ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿದ್ದಾರೆ.

## ಗದಗ ನ್ಯಾಯಾಲಯದಲ್ಲಿ ಸಂವಿಧಾನ ದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಸಂವಿಧಾನದಲ್ಲಿ ತಿಳಿಸಲಾಗಿರುವ ಮೂಲಭೂತ ಹಕ್ಕುಗಳನ್ನು ಪಡೆಯುವುದರ ಜೊತೆಗೆ, ಸಾಂವಿಧಾನಿಕ ಕರ್ತವ್ಯಗಳನ್ನೂ ಪಾಲಿಸಬೇಕು ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಬಸವರಾಜ ನುಡಿದರು.



ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಗದಗ ನ್ಯಾಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಂವಿಧಾನ ಪೀಠಿಕೆಯನ್ನು ಬೋಧಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರಾಜೇಶ್ವರ ಎಸ್ ಶೆಟ್ಟಿ, ಪ್ರಧಾನ ದಿವಾಣಿ ನ್ಯಾಯಾಧೀಶ ಅರುಣ ಚೌಗಲೆ, 2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶ ಬೀರಪ್ಪ ಕಾಂಬಳೆ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಂ.ಐ. ಹಿರೇಮನಿಪಾಟೀಲ ಮಾತನಾಡಿದರು. ವೇದಿಕೆಯಲ್ಲಿ 1ನೇ ಅಪರ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಖಾದರಸಾಬ ಎಚ್. ಬೆನಕಟ್ಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ. ಕೆ.ಗುರುಪ್ರಸಾದ, ಅಪರ ಹಿರಿಯ ದಿವಾಣಿ ನ್ಯಾಯಾಧೀಶ ಪ್ರಕಾಶ ಸಿ.ಕುರಬೆಟ್ಟ, 1ನೇ ಜೆಎಂಎಫ್‌ಸಿ ದಿವಾಣಿ ನ್ಯಾಯಾಧೀಶೆ ಪುಷ್ಪಾ ಜೋಗೋಜಿ ಉಪಸ್ಥಿತರಿದ್ದರು.

ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಚ್. ಮಾಡಲಗೇರಿ, ಜಂಟಿ ಕಾರ್ಯದರ್ಶಿ ಪ್ರಕಾಶ ಕಣಗಿನಹಾಳ, ಮುಖ್ಯ ಕಾನೂನು ನೆರವು ಅಭಿರಕ್ಷಕ ಎಸ್.ವಿ. ಗ್ರಾಮಪುರೋಹಿತ ಹಾಗೂ ನ್ಯಾಯಾಲಯದ ಸಿಬ್ಬಂದಿ, ಪೊಲೀಸ್ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಶೈನಾಜ ತೆಗ್ಗಿನಮನಿ ಸಂವಿಧಾನ ಗೀತೆ ಪ್ರಸ್ತುತಪಡಿಸಿದರು. ಎ.ಎಸ್. ಮಕಾನದಾರ ಸ್ವಾಗತಿಸಿದರು, ಬಿ.ಎಂ. ಕುಕನೂರ ನಿರೂಪಿಸಿದರು. ಕೆ.ಐ. ಖಂಡೇಬಾಗಿಲ ವಂದಿಸಿದರು.

## ಡಾ. ಜಿ.ಬಿ. ಬಿಡಿನಹಾಳರದು ಧೀಮಂತ ವ್ಯಕ್ತಿತ್ವ

■ವಿಜಯಸಾಕ್ಷಿ ಸುದ್ದಿ, ಗದಗ

ವೈದ್ಯರಾದ ಡಾ. ಜಿ.ಬಿ ಬಿಡಿನಹಾಳರದ್ದು ಕರ್ನಾಟಕದ ವೈದ್ಯಕೀಯ, ಕೃಷಿ, ಕ್ರೀಡೆ ಹಾಗೂ ಸಮಾಜಸೇವೆ ಸೇರಿದಂತೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಛಾಪು ಮೂಡಿಸಿರುವ ಧೀಮಂತ ವ್ಯಕ್ತಿತ್ವ ಎಂದು ಕಲಾಚೇತನ ಆಕಾಡೆಮಿ ಸಂಸ್ಥಾಪಕ ಡಾ. ಕಾವೆಂಶ್ರೀ ನುಡಿದರು.



ಇತ್ತೀಚೆಗೆ ಜರುಗಿದ ವೈದ್ಯಕೀಯ ಒಲಂಪಿಕ್ ಕ್ರೀಡಾಕೂಟದಲ್ಲಿ ಡಾ.ಬಿಡಿನಹಾಳರು ನಾಲ್ಕು ಬಂಗಾರದ ಪಡೆದು ರಾಜ್ಯಕ್ಕೆ ಕೀರ್ತಿ ತಂದದ್ದಕ್ಕಾಗಿ ಸೋಮವಾರ ನಗರದ ರೇಣುಕಾ ಆಸ್ಪತ್ರೆಯಲ್ಲಿ ಕಲಾಚೇತನ ವತಿಯಿಂದ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಗದಗ ಪರಿಸರದಲ್ಲಿ ರೇಣುಕಾ ಆಸ್ಪತ್ರೆಯನ್ನು ತೆ-ರೆದು ಬಡ ಹಾಗೂ ಮಧ್ಯಮ ವರ್ಗದ ರೋಗಿಗಳಲ್ಲಿ ಆರೋಗ್ಯ ಭಾಗ್ಯ ಕರುಣಿಸುತ್ತಿರುವ ಡಾ. ಬಿಡಿನಹಾಳರು ಮೊಟ್ಟಮೊದಲ ಬಾರಿಗೆ ವೈದ್ಯರ ಒಲಂಪಿಕ್ ಕ್ರೀಡೆಯಲ್ಲಿ ಹೊಸ ಇತಿಹಾಸ ನಿರ್ಮಿಸಿ ಇತರ ವೈದ್ಯರಿಗೆ ಮಾದರಿಯಾಗಿದ್ದಾರೆ. ವೈದ್ಯರು ಹವ್ಯಾಸಗಳನ್ನು ಬದಿಗೊತ್ತಿ ವೃತ್ತಿ, ಹಣ ಸಂಪಾದನೆಯಲ್ಲೇ ನಿರತರಾಗಿರುವ ಈ ಕಾಲದಲ್ಲಿ ವೃತ್ತಿಯ ಜೊತೆಗೆ ಹಲವು ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಶ್ರೀಯುತರು ಬದುಕಿನ ನಿಜವಾದ ಅರ್ಥವನ್ನು ಅರಿತವರಾಗಿದ್ದು, 68ರ ವಯಸ್ಸಿನಲ್ಲೂ ಯುವಕರನ್ನು ನಾಚಿಸುವಂಥ ಜೀವನೋತ್ಸಾಹ ಹೊಂದಿದ್ದಾರೆ. ಗ್ರಾಮೀಣ ಭಾಗದಲ್ಲಂತೂ ಬಿಡಿನಹಾಳ ವೈದ್ಯರ ಮನೆತನ ಜನಜನಿತವಾಗಿದೆ ಎಂದರು.

ಈ ಸಂದರ್ಭದಲ್ಲಿ ಕಲಾಚೇತನ ಆಕಾಡೆಮಿ ಉಪಾಧ್ಯಕ್ಷ ವಿಶ್ವನಾಥ ನಾಲವಾಡದ, ಕಾರ್ಯದರ್ಶಿ ಪ್ರಕಾಶ ಬೇಲಿ ಇದ್ದರು.

## ಪುರಸಭೆ ಸದಸ್ಯ ಮಹೇಶ ಹೊಗೆಸೊಪ್ಪಿನ ವಿರುದ್ಧ ಕ್ರಮಕ್ಕೆ ಮನವಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪುರಸಭೆ ಸದಸ್ಯ ಮಹೇಶ ಹೊಗೆಸೊಪ್ಪಿನ ಅವರು ತಮ್ಮ ಪತ್ನಿಯ ಹೆಸರಿನಲ್ಲಿ ಪಡೆದಿರುವ ಪುರಸಭೆ ಮಳಿಗೆಯ 3 ಲಕ್ಷ ರೂ ಬಾಡಿಗೆ ಬಾಕಿ ಉಳಿಸಿಕೊಂಡಿದ್ದಾರೆ ಮತ್ತು ಪೂರ್ವಾನುಮತಿ ಪಡೆಯದೇ ರಾಜ್ಯೋತ್ಸವ ಕಾರ್ಯಕ್ರಮ ಹೆಸರಿನಲ್ಲಿ ನ.26ರಂದು ಪಟ್ಟಣದ ಬಜಾರದ ಮುಖ್ಯ ರಸ್ತೆಯನ್ನು ಬಂದ್ ಮಾಡಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಮಾಡಿದ್ದಾರೆ. ಇವರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಸೋಮವಾರ ಸಾರ್ವಜನಿಕರು ಪುರಸಭೆಗೆ ಮನವಿ ಸಲ್ಲಿಸಿದರು.



ಮನವಿ ಪತ್ರದಲ್ಲಿ, ಮಹೇಶ ಹೊಗೆಸೊಪ್ಪಿನ ಕಾನೂನಿನ ಪರಿಧಿ ಮೀರಿ ಪುರಸಭೆಯ ವಾಣಿಜ್ಯ ಮಳಿಗೆ ಪಡೆದಿದ್ದಲ್ಲದೇ ಮಳಿಗೆಯ ಬಾಡಿಗೆ 3.ಲಕ್ಷ ಬಾಕಿ ಉಳಿಸಿಕೊಂಡಿದ್ದಾರೆ. ಸ್ವಾರ್ಥದಿಂದ ಪ್ರತಿಭಟನೆ ನಡೆಸುವುದು, ಪರವಾನಗಿ ಪಡೆಯದೇ ರಸ್ತೆ ಬಂದ್ ಮಾಡಿ ಸಾರ್ವಜನಿಕರಿಗೆ ತೊಂದರೆ ಕೊಡುವ ಕೆಲಸ ಮಾಡುತ್ತಿದ್ದಾರೆ. ಈ ಸದಸ್ಯರ ಮೇಲೆ ಪುರಸಭೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಪುರಸಭೆ ಮುಂದೆ ಸಾರ್ವಜನಿಕರೊಡಗೂಡಿ ಪ್ರತಿಭಟನೆಗಿಳಿಯಬೇಕಾಗುತ್ತದೆ ಎಂದು ಹೇಳಿದರು. ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ ಮನವಿ ಸ್ವೀಕರಿಸಿದರು.

ಈ ವೇಳೆ ನವೀನ ಬೆಳ್ಳಟ್ಟಿ, ಗಿರೀಶ ಚೌರಡ್ಡಿ, ವೆಂಕಣ್ಣ ಕಳ್ಳಿಮನಿ, ಮಾಂತೇಶ ತೋಟದ, ಬಸವರಾಜ ಚಕ್ರಸಾಲಿ, ಜಗದೀಶ ಪಾಟೀಲ, ನವೀನ ಕುಂಬಾರ, ಚೇತನ ಹೆಬ್ಬಾಳ, ಬಸವರಾಜ ಮಜ್ಜಿಗುಡ್ಡ, ರಾಘು ಪುರೋಹಿತ, ಮಂಜುನಾಥ ಮುಶಪ್ಪನವರ, ಸುರೇಶ ಮಾಳಗಿಮನಿ, ಆಕಾಶ ಸವದತ್ತಿ, ನವೀನ ದೊಡ್ಡಮನಿ, ರಾಮಚಂದ್ರ ಕಳ್ಳಿಮನಿ, ಮಾಂತೇಶ ಕುಂಬಾರ, ಮಾಂತೇಶ ಮಾದಾಪುರ, ಫಕ್ಕಿರೇಶ ಲಮಾಣಿ, ನೂರಪ್ಪ ಲಮಾಣಿ, ಗಣೇಶ ಲಮಾಣಿ, ಸುರೇಶ ಮಳಗಿಮನಿ, ಸುನೀಲ ದೇಸಾಯಿ ಮುಂತಾದವರಿದ್ದರು.

## ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ ಚಾಲನೆ

■ವಿಜಯಸಾಕ್ಷಿ ಸುದ್ದಿ, ಗದಗ

ನವೆಂಬರ 26ರಿಂದ 28ರವರೆಗೆ ಜರುಗಲಿರುವ ಗದಗ ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ ಜಿಲ್ಲಾ ಸತ್ರ ನ್ಯಾಯಾದೀಶರಾದ ಬಸವರಾಜ ನಗರದ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ರವಿವಾರ ಪಾರಿವಾಳ ಹಾಗೂ ಬಲೂನುಗಳನ್ನು ಹಾರಿಬಿಡುವ ಮೂಲಕ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪೊಲೀಸರು ದೈನಂದಿನ ಕರ್ತವ್ಯ ನಿರ್ವಹಣೆಯಲ್ಲಿ ಒತ್ತಡದಲ್ಲಿಯೇ ಕಾರ್ಯನಿರ್ವಹಿಸುತ್ತಾರೆ. ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಕರ್ತವ್ಯ ನಿರ್ವಹಿಸಬೇಕಾದರೆ ಉತ್ತಮ ಆರೋಗ್ಯ ಹೊಂದಿರಬೇಕು. ಉತ್ತಮ ದೈಹಿಕ ಹಾಗೂ ಮಾನಸಿಕ ಆರೋಗ್ಯ ಹೊಂದಲು ದೈನಂದಿನ ದಿನಚರಿಯಲ್ಲಿ ದೈಹಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದರು.

ಆರೋಗ್ಯಕರವಾದ ದೇಹದಲ್ಲಿ ಆರೋಗ್ಯಕರ ಮನಸ್ಸು ಇರುತ್ತದೆ ಎಂಬ ನಾಣ್ನುಡಿಯನ್ನು ನಾವೆಲ್ಲರೂ ಅಳವಡಿಸಿಕೊಂಡು ದೈಹಿಕವಾಗಿ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ಆರೋಗ್ಯಯುತ ಜೀವನ ನಮ್ಮದಾಗಿಸಿಕೊಳ್ಳಬೇಕು. ದೈಹಿಕ ಚಟುವಟಿಕೆ ನಿರಂತರವಾಗಿ ಮಾಡುವದರಿಂದ ಮನಸ್ಸು ಹುಮ್ಮಸ್ಸಿನಿಂದ ಇರಲಿದೆ. ಕ್ರೀಡೆಯಿಂದ ಮಾನಸಿಕ ಸ್ಥಿತಿ ಸ್ಥಿರವಾಗುವದರೊಂದಿಗೆ ನಮ್ಮಲ್ಲಿ ನಾಯಕತ್ವ ಗುಣ ವೃದ್ಧಿಯಾಗುತ್ತದೆ ಎಂದು ಹೇಳಿದರು.

ಸತತ 18 ವರ್ಷದಿಂದ ಗದಗ ಜಿಲ್ಲೆಗೆ ರಾಜ್ಯ, ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಪಾಲ್ಗೊಂಡು ಪ್ರಶಸ್ತಿ ತಂದಿದ್ದಕ್ಕಾಗಿ ಪುಷ್ಪಾ ಮಣ್ಣೂರ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೇಯಿ, ಪೊಲೀಸ್ ವರಿಷ್ಠಾಧಿಕರಿ ಬಿ.ಎಸ್. ನೇಮಗೌಡ ಸೇರಿದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

## ಡಿ.3ರಂದು ವಿಶ್ವ ವಿಕಲಚೇತನರ ದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲೆಯಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳು ಇವರುಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ 2023 ಕಾರ್ಯಕ್ರಮವನ್ನು ನಗರದ ಜಿಲ್ಲಾಡಳಿತ ಭವನದ ಮುಖ್ಯ ಸಭಾಂಗಣದಲ್ಲಿ ಡಿಸೆಂಬರ್ 3 ರಂದು ಬೆಳಿಗ್ಗೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ್ ಅವರುಗಳು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಆಗಮಿಸುವರು.

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಕಲ್ಯಾಣಾಧಿಕಾರಿ ಕೆ.ಮಹಾಂತೇಶ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಪರಶುರಾಮ ಶೆಟ್ಟೆಪ್ಪನವರ ಸ್ವಾಗತ ಕೋರಿದ್ದಾರೆ.

## ಶ್ರೀ ಮರಿಯಮ್ಮದೇವಿ ಅಗ್ನಿ ಮಹೋತ್ಸವ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಇಲ್ಲಿನ ಅಂಬೇಡ್ಕರ ನಗರದಲ್ಲಿಯ ಶ್ರೀ ಮರಿಯಮ್ಮದೇವಿ ಹಾಗೂ ಸ್ವಾರೆಮ್ಮದೇವಿಯ 69ನೇ ವರ್ಷದ ಜಾತ್ರಾ ಮಹೋತ್ಸವದ ನಿಮಿತ್ತ ಸೋಮವಾರ ಬೆಳಿಗ್ಗೆ ಸಡಗರ-ಸಂಭ್ರಮದಿಂದ ದೇವಸ್ಥಾನದ ಆವರಣದಲ್ಲಿ ನಿರ್ಮಿಸಿದ್ದ ಅಗ್ನಿಕುಂಡದಲ್ಲಿ ಭಕ್ತರು ಅಗ್ನಿ ಹಾಯುವುದರ ಮೂಲಕ ಅಗ್ನಿ ಮಹೋತ್ಸವವನ್ನು ಆಚರಿಸಿದರು.

ಅಗ್ನಿಮಹೋತ್ಸವದ ನಿಮಿತ್ತ ಬೆಳಿಗ್ಗೆ 8 ಗಂಟೆಗೆ ಹಳ್ಳದ ದುರಗಮ್ಮದೇವಿಯ ದೇವಸ್ಥಾನದಿಂದ ಶ್ರೀ ಮರಿಯಮ್ಮದೇವಿ ಹಾಗೂ ಸ್ವಾರೆಮ್ಮದೇವಿಯ ಉತ್ಸವ ಮೂರ್ತಿಯ ಪಲ್ಲಕ್ಕಿ ಮೆರವಣಿಗೆಯು ಕೆಳಗೇರಿ ಓಣಿಯಿಂದ, ಶೆಟ್ಟರ ಓಣಿ, ಬಜಾರ ರಸ್ತೆ, ಬಸವೇಶ್ವರ ವೃತ್ತದ ಮೂಲಕ ಅಂಬೇಡ್ಕರ ನಗರದಲ್ಲಿಯ ದೇವಸ್ಥಾನದವರೆಗೂ ಮೆರವಣಿಗೆ ಸಾಗಿತು. ಈ ಸಂದರ್ಭದಲ್ಲಿ ಭಕ್ತರು ಉತ್ಸವ ಮೂರ್ತಿಗಳಿಗೆ ತಮ್ಮ ಭಕ್ತಿ ಕಾಣಿಕೆಯನ್ನು ಸಮರ್ಪಿಸಿದರು. ಮೆರವಣಿಗೆ ಸಾಗುವ ರಸ್ತೆಯುದ್ದಕ್ಕೂ ಕಳೆದ 3-4 ದಿನಗಳ ಹಿಂದೆಯೇ ಸಿಂಗರಿಸಲಾಗಿತ್ತು.



VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka